# ಗ್ರಾಮ ಪಂಚಾಯಿತಿ ಚುನಾವಣೆ

# ಚುನಾವಣಾ ವೀಕ್ಷಕರ ಕೈಪಿಡಿ

ರಾಜ್ಯ ಚುನಾವಣಾ ಆಯೋಗ, ಕರ್ನಾಟಕ
2020

# ಮುನ್ನುಡಿ

ಚುನಾವಣೆಯು ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಒಂದು ಮಹತ್ವದ ಪ್ರಕ್ರಿಯೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಶಾಂತಿಯುತವಾಗಿ ನಡೆಸುವುದು ಒಂದು ಸವಾಲಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗಳು ಬಹಳ ಬಿರುಸಿನಿಂದ ಕೂಡಿರುತ್ತವೆ. ಚುನಾವಣೆಗಳಲ್ಲಿ ಹಣಬಲ, ತೋಳ್ಬಲ ಇತ್ಯಾದಿಗಳ ಪ್ರಭಾವವೂ ಹೆಚ್ಚಾಗುತ್ತಿದೆ.

ಚುನಾವಣಾ ಅಕ್ರಮಗಳನ್ನು ತಡೆಯುವ ನಿಟ್ಟಿನಲ್ಲಿ ಹಾಗೂ ಚುನಾವಣೆಗಳನ್ನು ಮುಕ್ತ ನ್ಯಾಯಸಮ್ಮತ ಹಾಗೂ ನಿಷ್ಪಕ್ಷಪಾತವಾಗಿ ನಡೆಸಲು ರಾಜ್ಯ ಚುನಾವಣಾ ಆಯೋಗಕ್ಕೆ ಸಹಕರಿಸಲು ತಮ್ಮನ್ನು ಶಾಸನಬದ್ಧವಾಗಿ ಚುನಾವಣಾ ವೀಕ್ಷಕರನ್ನಾಗಿ ನೇಮಿಸಲಾಗಿದೆ. ತಮ್ಮನ್ನು ವೀಕ್ಷಕರಾಗಿ ನೇಮಕಾತಿ ಹೊರಡಿಸಿದ ದಿನಾಂಕದಿಂದ ಚುನಾವಣೆ ಆಯೋಗದ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತೀರಿ ಹಾಗೂ ಆಯೋಗದ ನಿಯಂತ್ರಣದಲ್ಲಿರುತ್ತೀರಿ. ನೀವು ಚುನಾವಣೆಯನ್ನು ಮುಕ್ತವಾಗಿ, ನ್ಯಾಯಯುತವಾಗಿ ಮತ್ತು ಶಾಂತಿಯುತವಾಗಿ ನಿರ್ವಹಿಸುವ ನಿಟ್ಟಿನಲ್ಲಿ ಜಿಲ್ಲಾ ಆಡಳಿತ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆ ಅಧಿಕಾರಿಗಳೊಂದಿಗೆ ಸಮನ್ವಯತೆ ಸಾಧಿಸಬೇಕಿರುತ್ತದೆ. ಚುನಾವಣಾ ಅಧಿಕಾರಿಗಳಿಗೆ Guide ಹಾಗೂ Philosopher ಆಗಿರುತ್ತೀರಿ ವಿನ: ಅವರ ದೈನಂದಿನ ಕಾರ್ಯದಲ್ಲಿ ಅಡಚಣೆ ಉಂಟಾಗದಂತೆ ಜಾಗರೂಕತೆ ವಹಿಸುವುದು ಅಗತ್ಯವಿರುತ್ತದೆ. ಚುನಾವಣಾ ಅವಧಿಯಲ್ಲಿ ಪ್ರಮುಖವಾಗಿ ಆಯೋಗದ ಕೊಂಡಿಯಾಗಿ, ಆಯೋಗಕ್ಕೆ ಮಾಹಿತಿ ನೀಡುವುದಲ್ಲದೆ, ಆಯೋಗದ ಮಾರ್ಗಸೂಚಿಗಳನ್ನು ಅನುಷ್ಠಾನಗೊಳಿಸುವಲ್ಲಿ ಸಮನ್ವಯತೆ ಸಾಧಿಸಬೇಕಿರುತ್ತದೆ. ತಾವು ಈ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ಹಾಗೂ ನಿಷ್ಪಕ್ಷಪಾತವಾಗಿ ನಿರ್ವಹಿಸಿ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಲು ಸಹಕರಿಸುತ್ತೀರೆಂದು ಭಾವಿಸಲಾಗಿದೆ. ತಾವು ನಿರ್ವಹಿಸಬೇಕಾಗಿರುವ ಕಾರ್ಯಗಳ ಸಂಕ್ಷಿಪ್ತ ವಿವರಣೆಯನ್ನು ಈ ಕೈಪಿಡಿಯಲ್ಲಿ ನೀಡಲಾಗಿದೆ.

ವೀಕ್ಷಕರಾಗಿ ಕಾರ್ಯ ನಿರ್ವಹಿಸಲು ಅಗತ್ಯವಾದ ವೀಕ್ಷಕರ ಕೊಠಡಿ, ಸಹಾಯಕ ಸಿಬ್ಬಂದಿ, ವಾಹನ, ಪೀಠೋಪಕರಣ ಇತ್ಯಾದಿಗಳನ್ನು ತಮಗೆ ಜಿಲ್ಲಾ ಚುನಾವಣಾಧಿಕಾರಿಗಳು ಒದಗಿಸುವರು. ವೀಕ್ಷಕರಾಗಿ ನಿಮ್ಮ ಕಾರ್ಯನಿರ್ವಹಣೆಯು ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕದಿಂದ ಪ್ರಾರಂಭವಾಗಿ ಚುನಾವಣಾ ಫಲಿತಾಂಶ ಪ್ರಕಟವಾದ ನಂತರ ಅಂತಿಮಗೊಳ್ಳುತ್ತದೆ.

ತಾವು ಚುನಾವಣಾ ವೀಕ್ಷಕರಾಗಿ ಸಮರ್ಥವಾಗಿ ಕಾರ್ಯನಿರ್ವಹಿಸಿ ಚುನಾವಣೆಯು ನಿಷ್ಪಕ್ಷಪಾತ ಹಾಗೂ ನ್ಯಾಯ ಸಮ್ಮತವಾಗಿ ನಡೆಯಲು ತಮ್ಮ ಶಕ್ತಿಮೀರಿ ಶ್ರಮಿಸಿ ಆಯೋಗಕ್ಕೆ ಸಹಕರಿಸುತ್ತೀರೆಂದು ಆಶಿಸುತ್ತೇನೆ.


**ಡಾ॥ ಬಿ. ಬಸವರಾಜು,**
**ಆಯುಕ್ತರು,**
**ರಾಜ್ಯ ಚುನಾವಣಾ ಆಯೋಗ, ಕರ್ನಾಟಕ.**

# ಪರಿವಿಡಿ


| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| 1. | ಹಿನ್ನೆಲೆ | 1 |
| 2. | ನೇಮಕಾತಿಗೆ ಶಾಸನಬದ್ಧ ಆಧಾರ | 1 |
| 3. | ಚುನಾವಣಾ ವೀಕ್ಷಕರಿಗೆ ಚುನಾವಣೆ ಕೆಲಸಕಾರ್ಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲು ಸಭೆ | 1 |
| 4. | ಚುನಾವಣಾ ವೀಕ್ಷಕರ ಆಗಮನ | 1 |
| 5. | ಚುನಾವಣಾ ವೀಕ್ಷಕರ ಕರ್ತವ್ಯಗಳ ಸಂಕ್ಷಿಪ್ತ ಮೇಲು ನೋಟ | 2 |
| 6. | ಚುನಾವಣಾ ವೀಕ್ಷಕರ ಪ್ರವಾಸ ಮತ್ತು ಕೇಂದ್ರ ಸ್ಥಾನದಲ್ಲಿ ಹಾಜರಿರುವ ಬಗ್ಗೆ | 2 |
| 7. | ಚುನಾವಣಾ ವೀಕ್ಷಕರ ಪಾತ್ರ | 3 |
| 8. | ನಾಮಪತ್ರಗಳ ಪರಿಶೀಲನೆ ಮತ್ತು ಚುನಾವಣಾ ಚಿಹ್ನೆಗಳ ಹಂಚಿಕೆ | 4 |
| 9. | ಚುನಾವಣೆಗೆ ಸಂಬಂಧಿಸಿದ ಇತರೆ ವಿಷಯಗಳು | 4 |
| 10. | ಚುನಾವಣಾ ಪ್ರಚಾರದ ಅವಧಿಯಲ್ಲಿ ನೀತಿ ಸಂಹಿತೆ | 4 |
| 11. | ಮತದಾನಕ್ಕೆ ಮುಂಚಿನ ಪೂರ್ವ ಸಿದ್ದತೆ ವ್ಯವಸ್ಥೆಗಳು | 5 |
| 12. | ಮತದಾನ ದಿನದಂದು ಮೇಲ್ವಿಚಾರಣೆ / ನಿರ್ವಹಣೆ | 5 |
| 13. | ಮತದಾನದ ನಂತರದ ಕಾರ್ಯಗಳ ಮೇಲ್ವಿಚಾರಣೆ | 6 |
| 14. | ಮತಗಳ ಎಣಿಕೆ ಕಾರ್ಯ | 7 |
| 15. | ಚುನಾವಣಾ ವೀಕ್ಷಕರು ಆಯೋಗಕ್ಕೆ ಸಲ್ಲಿಸಬೇಕಾದ ವರದಿಗಳು | 7 |
| 16. | ಉಪ ವಿಭಾಗಾಧಿಕಾರಿ, ತಹಸೀಲ್ದಾರ್, ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ ಹಾಗೂ ಪೊಲೀಸ್ ಇಲಾಖೆಯೊಂದಿಗೆ ಸಭೆ | 8 |
| 17. | ಚುನಾವಣಾ ವೀಕ್ಷಕರು ಪರಿವೀಕ್ಷಿಸತಕ್ಕ ಅಂಶಗಳು | 8 |
| 18. | ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ | 9 |
| 19. | ಚಿಹ್ನೆಗಳ ಹಂಚಿಕೆ | 10 |
| 20. | ಮತದಾರರ ಪಟ್ಟಿ | 10 |
| 21. | ಅಭ್ಯರ್ಥಿಗಳೊಂದಿಗೆ ಸಭೆ ನಡೆಸುವುದು | 10 |
| 22. | ಚುನಾವಣಾ ಕ್ಷೇತ್ರಗಳಿಗೆ ಹಾಗೂ ಮತಗಟ್ಟೆಗಳಿಗೆ ಭೇಟಿ | 11 |
| 23. | ಕಾನೂನು ಸುವ್ಯವಸ್ಥೆ ಪಾಲನೆಗೆ ಮಾಡಿಕೊಂಡಿರುವ ತಯಾರಿಗಳ ಬಗ್ಗೆ ಸಮಗ್ರ ಪರಿಶೀಲನೆ | 11 |
| 24. | ಮಾದರಿ ನೀತಿ ಸಂಹಿತೆ ಅನುಷ್ಠಾನದ ಪರಿವೀಕ್ಷಣೆ | 12 |
| 25. | ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಲು ಚುನಾವಣಾ ವೀಕ್ಷಕರ ಪಾತ್ರ | 12 |
| 26. | ಚುನಾವಣಾ ಭ್ರಷ್ಟಾಚಾರಗಳು | 13 |
| 27. | ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು | 14 |

| ಕಂಡಿಕೆ | ವಿವರಗಳು | ಪುಟ ಸಂಖ್ಯೆ |
|---|---|---|
| 28. | ಮತಗಟ್ಟೆ ಸಿಬ್ಬಂದಿ ನೇಮಕಾತಿ, ತರಬೇತಿ ಮತ್ತು ತಯಾರಿ | 15 |
| 29. | ಮತದಾನ ದಿನಾಂಕಕ್ಕೆ ಸಂಬಂಧಿಸಿದ ತಯಾರಿ | 16 |
| 30. | ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ | 17 |
| 31. | ಮತದಾನ ದಿನದ ಚಟುವಟಿಕೆಗಳು | 17 |
| 32. | ಸ್ವೀಕರಿಸುವ (ಡಿಮಸ್ಟರಿಂಗ್) ಕೇಂದ್ರದಲ್ಲಿ ವಿಶೇಷ ಕೌಂಟರುಗಳನ್ನು ಸ್ಥಾಪಿಸುವ ಬಗ್ಗೆ | 18 |
| 33. | ದಾಖಲೆಗಳ ಪರಿಶೀಲನೆ | 18 |
| 34. | ಮರು ಮತದಾನ ಮತ್ತು ಮತದಾನ ಮುಂದೂಡಿದ ಪ್ರಕರಣಗಳು | 18 |
| 35. | ಮತದಾನ ಮುಕ್ತಾಯದ ವರದಿ | 19 |
| 36. | ಮತಗಳ ಎಣಿಕೆ | 19 |
| 37. | ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೈಟಿಗೆ ಅಳವಡಿಸುವುದು | 20 |
| 38. | ಚುನಾವಣಾ ವೀಕ್ಷಕರು ಮಾಡಬೇಕಾದ್ದು ಮತ್ತು ಮಾಡಬಾರದವುಗಳು (Do's and Don'ts) | 21 |
| ಅನುಬಂಧ–1 | ಚೆಕ್‌ಲಿಸ್ಟ್ | 23 |
| ಅನುಬಂಧ–2 | ವೀಕ್ಷಕರ ಮೊದಲನೇ ವರದಿ | 26 |
| ಅನುಬಂಧ–3 | ವೀಕ್ಷಕರ ಎರಡನೇ ವರದಿ | 28 |
| ಅನುಬಂಧ–4 | ವೀಕ್ಷಕರ ಮೂರನೇ ವರದಿ | 30 |
| ಅನುಬಂಧ–5 | ವೀಕ್ಷಕರ ನಾಲ್ಕನೇ ವರದಿ | 31 |
| ಅನುಬಂಧ–6 | ವೀಕ್ಷಕರ ಐದನೇ ವರದಿ | 33 |
| ಅನುಬಂಧ–7 | The Karnataka open places (prevention of Disfigurement) Act 1981 (Karnataka Act No. 35 of 1982) (Extract of related sections) | 34 |
| ಅನುಬಂಧ–8 | ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಉದ್ಧೃತ ಭಾಗಗಳು | 37 |

## ಹಿನ್ನೆಲೆ

1. ಗ್ರಾಮ ಪಂಚಾಯತಿ ಚುನಾವಣೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಉಸ್ತುವಾರಿ ಮಾಡಿ ಚುನಾವಣೆಗಳಲ್ಲಿ ಅಕ್ರಮಗಳನ್ನು ತಡೆಗಟ್ಟಿ ಚುನಾವಣೆಗಳನ್ನು ನಿಷ್ಪಕ್ಷಪಾತವಾಗಿ, ನ್ಯಾಯಸಮ್ಮತವಾಗಿ ಹಾಗೂ ಶಾಂತಿಯುತವಾಗಿ ನಡೆಸಲು ಆಯೋಗಕ್ಕೆ ಸಹಕರಿಸಲು ಹಿರಿಯ ಸರ್ಕಾರಿ ಅಧಿಕಾರಿಗಳನ್ನು ಚುನಾವಣಾ ವೀಕ್ಷಕರನ್ನಾಗಿ ನೇಮಿಸುವುದು ಸೂಕ್ತವಾಗಿರುತ್ತದೆಂದು ರಾಜ್ಯ ಚುನಾವಣಾ ಆಯೋಗ ಪರಿಗಣಿಸಿದೆ.

**2. ನೇಮಕಾತಿಗೆ ಶಾಸನಬದ್ಧ ಆಧಾರ:**

ಸಂವಿಧಾನದ ಪರಿಚ್ಛೇದ 243ಕೆ ಮತ್ತು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993ರ ಪ್ರಕರಣ 308 ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತಮ್ಮನ್ನು ಗ್ರಾಮ ಪಂಚಾಯತಿ ಚುನಾವಣೆಗೆ ಚುನಾವಣಾ ವೀಕ್ಷಕರನ್ನಾಗಿ ನೇಮಿಸಿದೆ. ತಾವು ರಾಜ್ಯ ಚುನಾವಣಾ ಆಯೋಗದ ಮೇಲ್ವಿಚಾರಣೆ, ನಿಯಂತ್ರಣ ಮತ್ತು ನಿರ್ದೇಶನಗಳನುಸಾರ ಚುನಾವಣೆ ಪ್ರಕ್ರಿಯೆಗಳ ಮೇಲ್ವಿಚಾರಣೆ, ಸ್ಪರ್ಧಿಸಿರುವ ಅಭ್ಯರ್ಥಿಗಳ ಚುನಾವಣಾ ಪ್ರಚಾರ, ಚುನಾವಣಾ ಪ್ರಚಾರದ ಮೆರವಣಿಗೆಗಳು, ಸದಾಚಾರ ಸಂಹಿತೆಗಳ ಉಲ್ಲಂಘನೆ ಮುಂತಾದವುಗಳ ಬಗ್ಗೆ ನಿಗಾವಹಿಸುವುದು ಹಾಗೂ ಆಯೋಗವು ಸೂಚಿಸುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದಾಗಿರುತ್ತದೆ.

**3. ಚುನಾವಣಾ ವೀಕ್ಷಕರಿಗೆ ಚುನಾವಣಾ ಕೆಲಸ ಕಾರ್ಯಗಳ ಬಗ್ಗೆ ಸಂಕ್ಷಿಪ್ತ ಮಾಹಿತಿ ನೀಡಲು ಸಭೆ:**

ರಾಜ್ಯ ಚುನಾವಣಾ ಆಯೋಗವು ಚುನಾವಣಾ ವೀಕ್ಷಕರನ್ನಾಗಿ ನೇಮಿಸಲಾಗುವ ಅಧಿಕಾರಿಗಳಿಗೆ ಆಯೋಗದಿಂದ ಅಥವಾ ಜಿಲ್ಲಾಧಿಕಾರಿಗಳ ಮೂಲಕ ಚುನಾವಣಾ ವಿಷಯಗಳಲ್ಲಿ ಅವರು ನಿರ್ವಹಿಸಬೇಕಾಗಿರುವ ಕೆಲಸ ಕಾರ್ಯಗಳ ಬಗ್ಗೆ ಸಭೆಯನ್ನು ಆಯೋಜಿಸಿ ಸಂಕ್ಷಿಪ್ತವಾಗಿ ಮಾಹಿತಿ ನೀಡಲಾಗುವುದು. ವೀಕ್ಷಕರಾಗಿ ನೇಮಿಸಲಾಗುವ ಅಧಿಕಾರಿಗಳು ತಪ್ಪದೆ ಈ ಸಭೆಗಳಿಗೆ ಹಾಜರಾಗುವುದು. ವೀಕ್ಷಕರನ್ನಾಗಿ ನೇಮಿಸಲಾದ ಅಧಿಕಾರಿಗಳನ್ನು ಸಕಾರಣಗಳಿಲ್ಲದೆ ಬದಲಾವಣೆ ಮಾಡಲಾಗುವುದಿಲ್ಲ.

**4. ಚುನಾವಣಾ ವೀಕ್ಷಕರ ಆಗಮನ:**

ಚುನಾವಣಾ ವೀಕ್ಷಕರು ನಾಮಪತ್ರಗಳನ್ನು ಸಲ್ಲಿಸಲು ನಿಗದಿಪಡಿಸಿರುವ ದಿನಾಂಕದಂದು ತಮ್ಮನ್ನು ನೇಮಿಸಿರುವ ಜಿಲ್ಲಾ ಕೇಂದ್ರ ಸ್ಥಾನದಲ್ಲಿ ಕರ್ತವ್ಯಕ್ಕೆ ಹಾಜರಾಗಿ, ಜಿಲ್ಲಾ ಚುನಾವಣಾಧಿಕಾರಿಯನ್ನು ಭೇಟಿ ಮಾಡುವುದು ಹಾಗೂ ತಮಗೆ ಹಂಚಿಕೆ ಮಾಡಲಾದ ತಾಲ್ಲೂಕುಗಳಿಗೆ ತೆರಳಿ ಕರ್ತವ್ಯ ನಿರ್ವಹಿಸುವುದು. ತಹಸೀಲ್ದಾರರು ಚೆಕ್‌ಲಿಸ್ಟ್‌ನಲ್ಲಿ (ಅನುಬಂಧ–1 ರಂತೆ) ಮಾಹಿತಿಯನ್ನು ತಯಾರಿಸಿ ಚುನಾವಣಾ ವೀಕ್ಷಕರುಗಳಿಗೆ ನೀಡತಕ್ಕದ್ದು.

**5. ಚುನಾವಣಾ ವೀಕ್ಷಕರ ಕರ್ತವ್ಯಗಳ ಸಂಕ್ಷಿಪ್ತ ಮೇಲು ನೋಟ:**

ನೀವು ದೀರ್ಘಾವಧಿ ಸೇವೆ ಸಲ್ಲಿಸಿರುವವರಾದುದರಿಂದ ಆಡಳಿತದಲ್ಲಿ ಸಾಕಷ್ಟು ಅನುಭವ ಇರುವುದರಿಂದ ಚುನಾವಣೆ ಪ್ರಕ್ರಿಯೆಗಳ ದಕ್ಷತೆ ಬಗ್ಗೆ ಸಮರ್ಥವಾಗಿ ಉಸ್ತುವಾರಿ ಮಾಡಲು ಸಾಧ್ಯವಿರುತ್ತದೆ. ಆದುದರಿಂದ ಚುನಾವಣೆಗಳನ್ನು ಮುಕ್ತ, ನ್ಯಾಯಸಮ್ಮತ, ನಿಷ್ಪಕ್ಷಪಾತ ಹಾಗೂ ಶಾಂತಿಯುತವಾಗಿ ಮತ್ತು ಯಶಸ್ವಿಯಾಗಿ ನಡೆಸಲು ಆಯೋಗಕ್ಕೆ ನೆರವಾಗುವಿರೆಂದು ಆಶಿಸಲಾಗಿದೆ. ಚುನಾವಣೆಯ ಎಲ್ಲಾ ಪ್ರಕ್ರಿಯೆಗಳನ್ನು ಗಮನಿಸಲು ನೀವು ಆಯೋಗದ "ಕಣ್ಣು" ಮತ್ತು "ಕಿವಿ" ಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ಕ್ಷೇತ್ರದಲ್ಲಿನ ವಿದ್ಯಮಾನಗಳನ್ನು ಆಯೋಗಕ್ಕೆ ತಿಳಿಸುವುದು, ಅಭ್ಯರ್ಥಿಗಳು ಮತ್ತು ಮತದಾರರು ಚುನಾವಣೆ ಕಾಯ್ದೆ, ಕಾನೂನು ಮತ್ತು ಕಾರ್ಯವಿಧಾನ, ನಿರ್ದೇಶನ ಹಾಗೂ ಸೂಚನೆಗಳನ್ನು ಯಾವುದೇ ಲೋಪಕ್ಕೆ ಅವಕಾಶವಿಲ್ಲದಂತೆ ಪಾಲಿಸುವ ಬಗ್ಗೆ ನಿಗಾವಹಿಸುವುದು. **ತಾವು ಆಯೋಗದ ಕಿವಿ ಮತ್ತು ಕಣ್ಣುಗಳಂತೆ ಕೆಲಸ ನಿರ್ವಹಿಸಬೇಕೇ ಹೊರತು ಆಯೋಗದ ನಿರ್ದೇಶನವಿಲ್ಲದೆ ಯಾವುದೇ ನಿರ್ಣಯಗಳನ್ನು ಕೈಗೊಳ್ಳಲು ಅವಕಾಶವಿರುವುದಿಲ್ಲ ಎಂಬುದನ್ನು ಸದಾ ಗಮನದಲ್ಲಿರಿಸಿಕೊಂಡಿರಬೇಕು.** ತಮಗೆ ದೊರೆತ ಯಾವುದೇ ಕಾನೂನು ಬಾಹಿರ ಚಟುವಟಿಕೆಗಳ ಮಾಹಿತಿ, ಗಮನಿಸಿದ ಅಂಶಗಳನ್ನು ಗೌಪ್ಯವಾಗಿರಿಸಿ ಆಯೋಗಕ್ಕೆ ಮಾತ್ರ ವರದಿ ಮಾಡಬೇಕು. ಯಾವುದೇ ಏಜೆನ್ಸಿ ಅಥವಾ ಮಾಧ್ಯಮಕ್ಕೆ ಯಾವುದೇ ಕಾರಣಕ್ಕೂ ಮಾಹಿತಿಗಳನ್ನು ನೀಡತಕ್ಕದ್ದಲ್ಲ. ವೀಕ್ಷಕರು ನೀಡುವ ಮಾಹಿತಿ, ಗಮನಿಸಿದ ಅಂಶಗಳ ಬಗ್ಗೆ ಆಯೋಗವು ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುತ್ತದೆ. ವೀಕ್ಷಕರು ಜಿಲ್ಲಾ ಚುನಾವಣಾಧಿಕಾರಿಗಳು/ ರಿಟರ್ನಿಂಗ್ ಅಧಿಕಾರಿಗಳು ಇವರೊಂದಿಗೆ ಚುನಾವಣೆ ಪ್ರಕ್ರಿಯೆಗಳ ಮತ್ತು ಚುನಾವಣೆಗಾಗಿ ಮಾಡಿರುವ ವ್ಯವಸ್ಥೆಗಳ ಬಗ್ಗೆ ಚರ್ಚಿಸುವುದು. ತಾವು ಚುನಾವಣೆ ಪ್ರಕ್ರಿಯೆಗಳಲ್ಲಿ ಲೋಪಗಳನ್ನು/ ತಪ್ಪುಗಳನ್ನು ಎತ್ತಿ ತೋರಿಸುವ ಬದಲು ಚುನಾವಣೆಗಳನ್ನು ಮುಕ್ತ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ದಿಸೆಯಲ್ಲಿ ಚುನಾವಣಾಧಿಕಾರಿಗಳಿಗೆ ಮಾರ್ಗದರ್ಶನ ಹಾಗೂ ಸಲಹೆಗಳನ್ನು ನೀಡಬೇಕು. **ವೀಕ್ಷಕರು ತಮ್ಮ ವರದಿಗಳನ್ನು ಆಯೋಗಕ್ಕೆ ಮಾತ್ರ ಕಳುಹಿಸಬೇಕು ಜಿಲ್ಲಾ ಚುನಾವಣಾಧಿಕಾರಿ/ಚುನಾವಣಾಧಿಕಾರಿ ಗಳಿಗೆ ಸಹ ವರದಿ ಪ್ರತಿಯನ್ನು ನೀಡತಕ್ಕದ್ದಲ್ಲ.**

**6. ಚುನಾವಣಾ ವೀಕ್ಷಕರ ಪ್ರವಾಸ ಮತ್ತು ಕೇಂದ್ರಸ್ಥಾನದಲ್ಲಿ ಹಾಜರಿರುವ ಬಗ್ಗೆ:**

ಚುನಾವಣಾ ವೀಕ್ಷಕರು, ವೀಕ್ಷಕರಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ತಮ್ಮ ಸ್ವಂತ ಕಾರ್ಯಕ್ಕಾಗಿ ಅಥವಾ ಕಛೇರಿಯ ಕಾರ್ಯಕ್ಕಾಗಿ ಹೋಗಬೇಕಾದಲ್ಲಿ ಆಯೋಗದಿಂದ ಪೂರ್ವಾನುಮತಿ ಪಡೆದುಕೊಳ್ಳಬೇಕಾಗಿರುತ್ತದೆ.

**7. ಚುನಾವಣಾ ವೀಕ್ಷಕರ ಪಾತ್ರ:**

ಆಯೋಗವು ನಿರ್ದಿಷ್ಟಪಡಿಸಿದ ತಾಲ್ಲೂಕುಗಳಲ್ಲಿನ ಎಲ್ಲಾ ಗ್ರಾಮ ಪಂಚಾಯತಿಗಳ ಚುನಾವಣಾ ಕಾರ್ಯಗಳ ವೀಕ್ಷಣೆಗೆ ವೀಕ್ಷಕರನ್ನು ನೇಮಿಸುತ್ತಿದೆ. ವೀಕ್ಷಕರು ತಮಗೆ ನೇಮಿಸಿರುವ ಪ್ರದೇಶಗಳ ವ್ಯಾಪ್ತಿಯಲ್ಲಿ ಚುನಾವಣಾ ಸಂಬಂಧ ಈ ಕೆಳಗಿನ ಕಾರ್ಯಗಳನ್ನು ನಿರ್ವಹಿಸಬೇಕಿದೆ.

1. ಆಯೋಗದ ಸೂಚನೆಯ ಮೇರೆಗೆ ನಾಮಪತ್ರ ಸಲ್ಲಿಸುವ ಪ್ರಕ್ರಿಯೆಯಲ್ಲಿ ಮೇಲ್ವಿಚಾರಣೆ ಮಾಡುವುದು, ನಾಮಪತ್ರಗಳ ಪರಿಶೀಲನೆ, ಉಮೇದುವಾರಿಕೆಯನ್ನು ಹಿಂಪಡೆಯುವಿಕೆಗಳ ಬಗ್ಗೆ ಮೇಲ್ವಿಚಾರಣೆ ಮಾಡಿ ಯಾವುದೇ ನಿಯಮಬಾಹಿರ/ಅಕ್ರಮಗಳು ನಡೆಯುತ್ತಿರುವುದಾಗಿ ಕಂಡುಬಂದಲ್ಲಿ ಆ ವಿಚಾರವನ್ನು ಆಯೋಗಕ್ಕೆ ನೇರವಾಗಿ ವರದಿ ಮಾಡುವುದು.

2. ನಾಮಪತ್ರ ಪ್ರಕ್ರಿಯೆಯ ಬಗ್ಗೆ ಅಥವಾ ಚಿಹ್ನೆಗಳ ಹಂಚಿಕೆಯ ಬಗ್ಗೆ ಅಭ್ಯರ್ಥಿಗಳಿಂದ ದೂರು/ಅಹವಾಲುಗಳಿದ್ದು ಪರಿಹಾರ ಕಾಣದೇ ಇರುವಂತಹ ಪ್ರಕರಣಗಳಿದ್ದಲ್ಲಿ ಈ ಬಗ್ಗೆ ಪರಿಶೀಲಿಸಿ, ಸೂಕ್ತ ವಿಚಾರಣೆ ನಡೆಸುವುದು.

3. ಸದಾಚಾರ ಸಂಹಿತೆಯ ಉಲ್ಲಂಘನೆಯ ಪ್ರಕರಣಗಳ ಬಗ್ಗೆ, ಸಭೆಗಳ ಬಗ್ಗೆ ವಿಡಿಯೋ ಕ್ಲಿಪ್ಪಿಂಗ್ ಗಳನ್ನು ವೀಕ್ಷಿಸಿ, ಸಾಧ್ಯವಿದ್ದಲ್ಲಿ/ಅವಶ್ಯವಿದ್ದಲ್ಲಿ ಅತೀ ಮುಖ್ಯವಾದ ಸಭೆ/ ಮೆರವಣಿಗೆಗಳಿಗೆ ಭೇಟಿ ನೀಡಿ ನೇರವಾಗಿ ವಿಷಯವನ್ನು ಸಂಗ್ರಹಿಸುವುದು. ಸಾರ್ವಜನಿಕ ಆಸ್ತಿ/ಕಟ್ಟಡಗಳನ್ನು ವಿರೂಪಗೊಳಿಸುವುದನ್ನು ತಡೆಗಟ್ಟುವ ಕಾಯಿದೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವುದು.

4. ಸರ್ವಿಸ್ ಮತದಾರರಿಗೆ ನಿಯಮಿತವಾಗಿ ಅಂಚೆ ಮತಪತ್ರಗಳು ರವಾನೆಯಾಗಿರುವ ಬಗ್ಗೆ, ಮತದಾನ ಸಿಬ್ಬಂದಿಗಳ ನಿಯೋಜನೆ, ಮತ್ತು ಅವರುಗಳಿಗೆ ಚುನಾವಣಾ ಸಾಮಗ್ರಿಗಳ/ಚುನಾವಣಾ ಕಾಗದಪತ್ರಗಳನ್ನು ವಿತರಿಸಲು ಸೂಕ್ತ ಕೌಂಟರ್‌ಗಳ ಏರ್ಪಾಡು, ಪೊಲೀಸ್ ಮತ್ತು ಸೆಕ್ಯೂರಿಟಿ ಸಿಬ್ಬಂದಿಗಳ ವ್ಯವಸ್ಥೆಗಳನ್ನು ಆಯೋಗದ ನಿರ್ದೇಶನಗಳಂತೆ ನಿರ್ವಹಿಸಿರುವ ಬಗ್ಗೆ ಮೇಲ್ವಿಚಾರಣೆ ನಡೆಸಬೇಕಿರುತ್ತದೆ.

5. ಮತದಾನಾಧಿಕಾರಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸುವ ಬಗ್ಗೆ ರ್‍ಯಾಂಡಮೈಜೇಶನ್ (Randomization) ಪ್ರಕ್ರಿಯೆಯಲ್ಲಿ ಭಾಗವಹಿಸಿ ಪರಿಶೀಲನೆ ನಡೆಸುವುದು.

ಮೇಲ್ಕಂಡ ಪ್ರಕ್ರಿಯೆಗಳಲ್ಲಿ ನೇರವಾಗಿ ಮೇಲ್ವಿಚಾರಣೆ ಮಾಡುವುದಲ್ಲದೆ, ಚುನಾವಣೆಗೆ ಸಂಬಂಧಪಟ್ಟ ಇತರೆ ಎಲ್ಲಾ ಹಂತಗಳನ್ನು ವೀಕ್ಷಕರು ವೀಕ್ಷಿಸಿ, ಅದರ ವರದಿಯನ್ನು ಸಲ್ಲಿಸುವುದನ್ನು ಆಯೋಗವು ನಿರೀಕ್ಷಿಸುತ್ತದೆ. ವೀಕ್ಷಕರು ಪರಿಶೀಲಿಸಬೇಕಾದ ಕೆಲವು ಪ್ರಕ್ರಿಯೆಗಳ ಬಗ್ಗೆ ಈ ಕೆಳಕಂಡ ಉದಾಹರಣೆಗಳನ್ನು ನೀಡಿದೆ.

**8. ನಾಮಪತ್ರಗಳ ಪರಿಶೀಲನೆ ಮತ್ತು ಚುನಾವಣಾ ಚಿಹ್ನೆಗಳ ಹಂಚಿಕೆ:**

1. ನಾಮ ಪತ್ರವನ್ನು ಪರಿಶೀಲಿಸಿ ಅಂಗೀಕರಿಸುವ ಅಥವಾ ತಿರಸ್ಕರಿಸುವ ನಿರ್ಣಯವನ್ನು ಕೈಗೊಳ್ಳುವ ಅಧಿಕಾರ ಚುನಾವಣಾಧಿಕಾರಿಗಳಿಗೆ ಮಾತ್ರವಿದ್ದು ಅವರು ಒಬ್ಬ ನ್ಯಾಯಾಧೀಶನಂತೆ ಕರ್ತವ್ಯ ನಿರ್ವಹಿಸಬೇಕಾಗುತ್ತದೆ. ಅವರು ಆಯೋಗವು ನೀಡುವ ಸೂಚನೆ / ನಿರ್ದೇಶನಗಳನ್ನು ತಿಳಿದುಕೊಂಡಿದ್ದು ಚಾಲ್ತಿಯಲ್ಲಿರುವ ಚುನಾವಣಾ ಚಿಹ್ನೆಗಳ ಆದೇಶಗಳನ್ನು ಹೊಂದಿರಬೇಕಾಗಿರುತ್ತದೆ.

2. ಚುನಾವಣೆ ಚಿಹ್ನೆಗಳ ಹಂಚುವಿಕೆ ವಿಚಾರದಲ್ಲಿ ಚುನಾವಣಾಧಿಕಾರಿಯು ಕಾನೂನನ್ನು ಮತ್ತು ಆಯೋಗದ ಎಲ್ಲಾ ನಿರ್ದೇಶನಗಳನ್ನು ತಿಳಿದುಕೊಂಡಿರಬೇಕು.

**9. ಚುನಾವಣೆಗೆ ಸಂಬಂಧಿಸಿದ ಇತರೆ ವಿಷಯಗಳು:**

1. ಮತದಾರರ ಪಟ್ಟಿಯು ಸಿದ್ದವಾಗಿದ್ದು ಅದರಲ್ಲಿ ತೀವ್ರತರಹದ ಲೋಪದೋಷಗಳಿದ್ದಲ್ಲಿ ಅದನ್ನು ಪರಿಶೀಲಿಸಿ ಆಯೋಗಕ್ಕೆ ವರದಿ ಮಾಡುವುದು ವಿನಹ: ಯಾವುದೇ ತಿದ್ದುಪಡಿಗೆ ನೇರವಾಗಿ ಕ್ರಮವಹಿಸಲು ಅವಕಾಶವಿರುವುದಿಲ್ಲ.

2. ಅಭ್ಯರ್ಥಿಗಳಿಗೆ ನೀಡಿರುವ ಮತದಾರರ ಪಟ್ಟಿಗಳು ಮತ್ತು ಮತದಾನಕ್ಕೆ ಉಪಯೋಗಿಸುವ ಮತದಾರರ ಪಟ್ಟಿಯು ಒಂದೇ ಆಗಿರತಕ್ಕದ್ದು.

**10. ಚುನಾವಣಾ ಪ್ರಚಾರದ ಅವಧಿಯಲ್ಲಿ ನೀತಿ ಸಂಹಿತೆ:**

1. ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ನೀತಿ ಸಂಹಿತೆಯನ್ನು ಜಾರಿಗೊಳಿಸಿ, ಕಟ್ಟುನಿಟ್ಟಾಗಿ ಪಾಲಿಸುವ ಬಗ್ಗೆ ಮೇಲ್ವಿಚಾರಣೆ ಮಾಡಬೇಕು. ಇದರಲ್ಲಿ ಯಾವುದೇ ಲೋಪದೋಷಗಳು ಕಂಡುಬಂದಲ್ಲಿ ಅದನ್ನು ಜಿಲ್ಲಾ ಚುನಾವಣಾಧಿಕಾರಿ ಮತ್ತು ಚುನಾವಣಾಧಿಕಾರಿಗಳ ಗಮನಕ್ಕೆ ತರುವುದು. ಲೋಪಗಳನ್ನು ಸರಿಪಡಿಸಿಕೊಳ್ಳದೇ ಇದ್ದಲ್ಲಿ ಅದನ್ನು ಆಯೋಗಕ್ಕೆ ವರದಿ ಮಾಡುವುದು.

2. ಅಭ್ಯರ್ಥಿಗಳ ಸಭೆಯಲ್ಲಿ ಸದಾಚಾರ ಸಂಹಿತೆಯ ಪಾಲನೆ ಬಗ್ಗೆ ಹಾಗೂ ರಾಜ್ಯ ಚುನಾವಣಾ ಆಯೋಗವು ಈ ವಿಚಾರದಲ್ಲಿ ನೀಡುವ ನಿರ್ದೇಶನಗಳ ಬಗ್ಗೆ ವಿವರಣೆಗಳನ್ನು ನೀಡುವುದು.

3. ಸದಾಚಾರ ಸಂಹಿತೆ ಕಟ್ಟುನಿಟ್ಟಿನ ಜಾರಿಯ ಬಗ್ಗೆ ಗಮನಹರಿಸುವುದು.

4. ಗ್ರಾಮ ಪಂಚಾಯಿತಿ ಚುನಾವಣೆಗಳು ಪಕ್ಷರಹಿತವಾಗಿ ನಡೆಯುವುದರಿಂದ ರಾಜಕೀಯ ಪಕ್ಷಗಳ ಚಿಹ್ನೆಗಳನ್ನು ಮತ್ತು ರಾಜಕೀಯ ಮುಖಂಡರ ಭಾವಚಿತ್ರಗಳನ್ನು ಉಪಯೋಗಿಸಿ ಪ್ರಚಾರವನ್ನು ಯಾವುದೇ ಅಭ್ಯರ್ಥಿಗಳು ಮಾಡದೇ ಇರುವ ಬಗ್ಗೆ ಗಮನಹರಿಸುವುದು.

**11. ಮತದಾನಕ್ಕೆ ಮುಂಚಿನ ಪೂರ್ವ ಸಿದ್ದತೆ ವ್ಯವಸ್ಥೆಗಳು:**

1. ಸ್ಪರ್ಧಿಸುವ ಉಮೇದುವಾರರ ಪಟ್ಟಿ ತಯಾರಿಸಿದ ಕೂಡಲೆ ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ರವಾನಿಸಲು ಮಾಡಿರುವ ವ್ಯವಸ್ಥೆಗಳನ್ನು ಪರಿಶೀಲಿಸುವುದು.
2. ಮತದಾನ ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸಲು ವೀಕ್ಷಕರ ಸಮ್ಮುಖದಲ್ಲಿ Randomization ಮಾಡಲಾಗುವುದರಿಂದ ಆ ಸಮಯದಲ್ಲಿ ಹಾಜರಿರತಕ್ಕದ್ದು.
3. ಮತದಾನ ಸಿಬ್ಬಂದಿಗಳಿಗೆ ಚುನಾವಣೆಯ ಬಗ್ಗೆ ಸೂಕ್ತ ತರಬೇತಿ ನೀಡಲು ಮಾಡಿರುವ ತರಬೇತಿ ಶಿಬಿರದ ಪರಿಶೀಲನೆ ನಡೆಸುವುದು.
4. ಮತಗಟ್ಟೆ ಸಿಬ್ಬಂದಿಗಳಿಗೆ ಅಂಚೆ ಮತಪತ್ರ ನೀಡುವ ಬಗ್ಗೆ ಮಾಡಿರುವ ವ್ಯವಸ್ಥೆಯ ಪರಿಶೀಲನೆ.
5. ಮತದಾನ ಕೇಂದ್ರಗಳ ಪಟ್ಟಿಯಂತೆ ನಿಗಧಿಪಡಿಸಿರುವ ಎಲ್ಲಾ ಮತಗಟ್ಟೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಭೌತಿಕವಾಗಿ ಪರಿಶೀಲಿಸಿದ್ದು ಚುನಾವಣೆಗೆ ಯೋಗ್ಯವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಲು ಕೆಲವು ಮತಗಟ್ಟೆಗಳಿಗೆ ಖುದ್ದು ಭೇಟಿ ನೀಡಿ ಪರಿಶೀಲಿಸುವುದು.
6. ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳು ಹಾಗೂ ದುರ್ಬಲ ಮತದಾರರಿರುವ ಪ್ರದೇಶಗಳನ್ನು ಗುರುತಿಸಿರುವುದನ್ನು ಪರಿಶೀಲಿಸುವುದು.
7. ಕಾನೂನು ಮತ್ತು ಸುವ್ಯವಸ್ಥೆ ವಿಚಾರದಲ್ಲಿ ಮತ್ತು ಅಗತ್ಯ ಪೊಲೀಸ್ ಸಿಬ್ಬಂದಿಗಳ ನಿಯೋಜನೆ ಬಗ್ಗೆ ಉಪ ವಿಭಾಗದ ದಂಡಾಧಿಕಾರಿಗಳೊಂದಿಗೆ ಮತ್ತು ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸುವುದು.
8. ಮತದಾನದ ಹಿಂದಿನ ದಿನದಂದು ಮತಗಟ್ಟೆ ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ತೆರಳಲು ಮಾಡಿರುವ ಮಸ್ಟರಿಂಗ್ ಮತ್ತು ಮತದಾನ ಮುಗಿದ ನಂತರ ಸಂಗ್ರಹಣಾ ಕೇಂದ್ರದ ಡಿಮಸ್ಟರಿಂಗ್ ಕಾರ್ಯಕ್ಕಾಗಿ ಮಾಡಿರುವ ಸಿದ್ಧತೆಗಳು ಉತ್ತಮವಾಗಿರುವ ಬಗ್ಗೆ ಪರಿಶೀಲಿಸಿ ಖಾತ್ರಿಪಡಿಸಿಕೊಳ್ಳುವುದು.
9. ಎಣಿಕೆ ಕೇಂದ್ರ ಮತ್ತು ಎಣಿಕೆಗಾಗಿ ಮಾಡಿರುವ ಸಿದ್ಧತೆಗಳ ಬಗ್ಗೆ ಪರಿಶೀಲನೆ ಮಾಡುವುದು.

**12. ಮತದಾನದ ದಿನದಂದು ಮೇಲ್ವಿಚಾರಣೆ/ ನಿರ್ವಹಣೆ**

1. ಸೆಕ್ಟರ್ ಆಫೀಸರ್‌ಗಳನ್ನು ಸೂಕ್ತ ಜಾಗಗಳಲ್ಲಿ ನಿಯೋಜಿಸಲಾಗಿದೆಯೇ ಎಂಬುದನ್ನು ಪರಿಶೀಲಿಸುವುದು:
2. ಮತದಾನ ಪ್ರಾರಂಭವಾಗುವುದಕ್ಕೆ ಮುನ್ನ ಮತಪೆಟ್ಟಿಗೆ ಖಾಲಿ ಇರುವ ಬಗ್ಗೆ ಅಭ್ಯರ್ಥಿಗಳ ಮತಗಟ್ಟೆ ಏಜೆಂಟರಿಗೆ ಪರೀಕ್ಷಿಸಲು ಅವಕಾಶ ನೀಡಿರುವ ಬಗ್ಗೆ ಮತ್ತು ಖಾಲಿ ಮತಪೆಟ್ಟಿಗೆಯನ್ನು ಪ್ರದರ್ಶಿಸಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಇಂತಹ ಸಂದರ್ಭದಲ್ಲಿ ಒಬ್ಬ ಪೋಲಿಂಗ್

ಏಜೆಂಟನೂ ಇಲ್ಲದಿರುವಂತಹ ಅಥವಾ ಒಬ್ಬನೇ ಏಜೆಂಟನು ಇರುವಂತಹ ಪ್ರಕರಣಗಳನ್ನು ಗುರುತಿಸಿ ಪರಿಶೀಲಿಸುವುದು.

3. ವಿದ್ಯುನ್ಮಾನ ಮತಯಂತ್ರ ಬಳಸಿದಲ್ಲಿ, ಅಣಕು ಮತದಾನದಲ್ಲಿ ಕನಿಷ್ಟ ಪಕ್ಷ 10 ಮತಗಳನ್ನು ಹಾಕಿದ ಬಗ್ಗೆ ಪರಿಶೀಲನೆ ಮಾಡುವುದು.

4. ಮತದಾನ ನಡೆಯುತ್ತಿರುವ ಸಂದರ್ಭದಲ್ಲಿ ಮತದಾನದ ಅಂಕಿ–ಅಂಶಗಳನ್ನು ಗಮನಿಸಿ, ಮತದಾನವು ಬಿರುಸಿನಿಂದ ಅಥವಾ ಸಾಮಾನ್ಯವಾಗಿ ನಡೆಯುತ್ತಿದೆಯೇ ಎಂಬ ಬಗ್ಗೆ ಪರಿಶೀಲಿಸುವುದು.

5. ಮತದಾನದ ಅವಧಿಯಲ್ಲಿ ಯಾವುದೇ ವಿಶೇಷ ಪ್ರಕರಣಗಳು/ಘಟನೆಗಳು ಸಂಭವಿಸಿದ ಬಗ್ಗೆ ಗಮನಿಸುವುದು.

6. ಯಾವುದೇ ಮತಗಟ್ಟೆಯಲ್ಲಿ ಮತದಾನವು ತಡವಾಗಿ ಪ್ರಾರಂಭವಾದ ಬಗ್ಗೆ ಮತ್ತು ಮತದಾನವು ಸ್ಥಗಿತಗೊಂಡಿರುವ ಬಗ್ಗೆ ಪರಿಶೀಲಿಸುವುದು.

7. ಆಯೋಗಕ್ಕೆ ವರದಿ ಮಾಡುವಂತಹ ಯಾವುದೇ ಪ್ರಕರಣಗಳಿದ್ದಲ್ಲಿ ಅದನ್ನು ವರದಿಮಾಡುವುದು.

8. ಮತದಾನ ಮುಕ್ತಾಯದ ನಂತರ ಪೋಲಿಂಗ್ ಅಧಿಕಾರಿಗಳಿಂದ ಸಂಗ್ರಹಿಸಿಕೊಳ್ಳಬೇಕಾದ ಸಾಮಗ್ರಿಗಳನ್ನು ಸ್ವೀಕರಿಸಲು ಎಲ್ಲಾ ಪೂರ್ವ ಸಿದ್ದತೆಗಳೊಂದಿಗೆ ತಯಾರಿರುವ ತಂಡಗಳನ್ನು ರಚಿಸಿ ಮಾಡಿರುವ ವ್ಯವಸ್ಥೆಗಳನ್ನು ಪರಿಶೀಲಿಸುವುದು. ಶಾಸನಬದ್ಧವಲ್ಲದ ಲಕೋಟೆಗಳನ್ನು ಮತಪೆಟ್ಟಿಗೆ/ಮತಯಂತ್ರ ದೊಂದಿಗೆ ಭದ್ರತಾ ಕೊಠಡಿಯಲ್ಲಿ ಇಡಲಾಗುತ್ತಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುವುದು.

9. ಯಾವುದೇ ಮತಗಟ್ಟೆಯಲ್ಲಿ ಅಹಿತಕರ ಘಟನೆ ನಡೆದಿದ್ದಲ್ಲಿ ಅಂತಹ ಮತಗಟ್ಟೆಯ ಸಾಮಗ್ರಿಗಳನ್ನು ಸ್ವೀಕರಿಸಲು ಪ್ರತ್ಯೇಕವಾಗಿ ವಿಶೇಷ ಕೌಂಟರ್‌ಅನ್ನು ಸ್ಥಾಪಿಸಿ, ಅಂತಹ ಮತಗಟ್ಟೆಯ ಅಧಿಕಾರಿಗಳಿಂದ ಪಡೆದುಕೊಳ್ಳಬೇಕಾದ ಅವಶ್ಯಕ ಮಾಹಿತಿಯನ್ನು ಪಡೆದುಕೊಳ್ಳುವ ಬಗ್ಗೆ ಮಾಡಿರುವ ವ್ಯವಸ್ಥೆಯನ್ನು ಪರಿಶೀಲಿಸುವುದು.

**13. ಮತದಾನದ ನಂತರದ ಕಾರ್ಯಗಳ ಮೇಲ್ವಿಚಾರಣೆ:**

ಮತದಾನವು ಸರಿಯಾದ ರೀತಿಯಲ್ಲಿ ನಡೆದಿದೆ ಅಥವಾ ಮರುಮತದಾನದ ಅವಶ್ಯಕತೆ ಇದೆ ಎಂಬ ಬಗ್ಗೆ ನಿರ್ಧರಿಸಲು ವಾಸ್ತವ ಸಂಗತಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಮತದಾನದ ಬಗ್ಗೆ ಹಾಗೂ ಮರುಮತದಾನ ನಡೆಸುವ ಅಗತ್ಯತೆ ಬಗ್ಗೆ ಆಯೋಗಕ್ಕೆ ವರದಿ ಮಾಡುವುದು.

**14. ಮತಗಳ ಎಣಿಕೆ ಕಾರ್ಯ:**

1. ಮತಗಳ ಎಣಿಕೆ ಕಾರ್ಯದ ಬಗ್ಗೆ ಮಾಡಿರುವ ವ್ಯವಸ್ಥೆಯನ್ನು ಪರಾಮರ್ಶಿಸುವುದು.

2. ವೀಕ್ಷಕರ ಸಮ್ಮುಖದಲ್ಲಿ Randomization ಮಾಡಿ ಮತ ಎಣಿಕೆ ಸಿಬ್ಬಂದಿಗಳನ್ನು ಎಣಿಕೆ ಟೇಬಲ್‌ಗಳಿಗೆ ನಿಯೋಜಿಸಬೇಕಾಗಿರುವುದರಿಂದ, ಆ ಸಮಯದಲ್ಲಿ ಎಣಿಕೆ ಕೇಂದ್ರದಲ್ಲಿ ವೀಕ್ಷಕರು ಹಾಜರಿರಬೇಕಿರುತ್ತದೆ.

3. ಮತಪೆಟ್ಟಿಗೆಯಲ್ಲಿ ಮತಗಳನ್ನು ಎಣಿಕೆ ಮಾಡುವ ಮೊದಲು ಅಂಚೆ ಮತಪತ್ರಗಳ ಎಣಿಕೆಯನ್ನು ಮುಕ್ತಾಯಗೊಳಿಸಿ, ನಂತರ ಮತಪೆಟ್ಟಿಗೆಯಲ್ಲಿನ ಮತಗಳ ಎಣಿಕೆಯನ್ನು ಪ್ರಾರಂಭಿಸುವುದನ್ನು ಖಚಿತಪಡಿಸಿಕೊಳ್ಳುವುದು.

4. ಪ್ರತಿ ಸುತ್ತಿನ ಎಣಿಕೆಯಲ್ಲಿ ವೀಕ್ಷಕರು ಯಾವುದಾದರೂ ಎರಡು ಮತಗಟ್ಟೆಗಳ ಮತಪತ್ರಗಳನ್ನು ಪರಿಶೀಲಿಸಿ ಎಣಿಕೆ ಸಿಬ್ಬಂದಿಗಳು ಮಾಡಿರುವ ಎಣಿಕೆ ಫಲಿತಾಂಶದ ಪಟ್ಟಿಯೊಂದಿಗೆ ತಾಳೆ ನೋಡಿ ಸರಿ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.

5. ಪ್ರತಿ ಸುತ್ತಿನ ಎಣಿಕೆಯ ನಂತರ ಆ ಸುತ್ತಿನ ಫಲಿತಾಂಶವನ್ನು ಪ್ರಕಟಿಸಲು ಮಾಡಿರುವ ವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳುವುದು.

6. ಪ್ರತಿ ಕ್ಷೇತ್ರದ ಎಲ್ಲಾ ಎಣಿಕೆ ಕಾರ್ಯ ಮುಕ್ತಾಯದ ನಂತರ ಎಣಿಕೆಯು ಸರಿಯಾಗಿದೆ ಎಂಬುದನ್ನು ಖಚಿತಪಡಿಸಿಕೊಂಡು ಚುನಾವಣಾಧಿಕಾರಿಗಳು ಫಲಿತಾಂಶ ಘೋಷಿಸುವುದನ್ನು ಖಾತ್ರಿಪಡಿಸಿಕೊಳ್ಳುವುದು.

7. ಮರು ಎಣಿಕೆ ಆದ ಸಂದರ್ಭದಲ್ಲಿ ಮರು ಎಣಿಕೆಯ ಬಗ್ಗೆ ಆಯೋಗಕ್ಕೆ ವರದಿ ಮಾಡುವುದು.

**15. ಚುನಾವಣಾ ವೀಕ್ಷಕರು ಆಯೋಗಕ್ಕೆ ಸಲ್ಲಿಸಬೇಕಾದ ವರದಿಗಳು:**

ಚುನಾವಣಾ ವೀಕ್ಷಕರು ಅನುಬಂಧದಲ್ಲಿ ನೀಡಿರುವ ನಮೂನೆಗಳಲ್ಲಿ ವರದಿ ನೀಡುವುದಲ್ಲದೆ ಚುನಾವಣೆಯ ಯಾವುದೇ ಹಂತದಲ್ಲಿ ಅಕ್ರಮಗಳು/ತಪ್ಪುಗಳಾಗಿದ್ದಲ್ಲಿ ಅದನ್ನು ಆಯೋಗಕ್ಕೆ ವರದಿ ಮಾಡುವುದು.

1. ಮೊದಲನೇ ವರದಿಯನ್ನು ಚುನಾವಣಾ ವೀಕ್ಷಕರು ನಾಮಪತ್ರ ಪರಿಶೀಲನೆ ಮುಗಿದ ಕೂಡಲೇ ಆಯೋಗಕ್ಕೆ ಕಳುಹಿಸತಕ್ಕದ್ದು. (ಅನುಬಂಧ-2)

2. ಎರಡನೇ ವರದಿಯನ್ನು ಚುನಾವಣಾ ವೀಕ್ಷಕರು ನಾಮಪತ್ರ ಹಿಂತೆಗೆದುಕೊಂಡ ನಂತರದ ದಿನಾಂಕದಂದು ಕಳುಹಿಸತಕ್ಕದ್ದು. (ಅನುಬಂಧ-3)

3. ಮೂರನೇ ವರದಿಯನ್ನು ಚುನಾವಣಾ ವೀಕ್ಷಕರು ಮಸ್ಟರಿಂಗ್ ಕಾರ್ಯ ಮುಗಿದ ಕೂಡಲೇ ಆಯೋಗಕ್ಕೆ ಕಳುಹಿಸತಕ್ಕದ್ದು. (ಅನುಬಂಧ-4).

4. ನಾಲ್ಕನೇ ವರದಿಯನ್ನು ಚುನಾವಣಾ ವೀಕ್ಷಕರು ಮತದಾನ ಪ್ರಕ್ರಿಯೆ ಮುಗಿದ ತಕ್ಷಣ ಆಯೋಗಕ್ಕೆ ಕಳುಹಿಸತಕ್ಕದ್ದು. (ಅನುಬಂಧ-5).

5. ಐದನೇ ವರದಿಯನ್ನು ಚುನಾವಣಾ ವೀಕ್ಷಕರು ಮತ ಎಣಿಕೆ ಮುಗಿದ ನಂತರ ಕಳುಹಿಸತಕ್ಕದ್ದು. (ಅನುಬಂಧ-6)

6. ಈ ಮೇಲ್ಕಂಡ ವರದಿಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಇ-ಮೇಲ್ ಮುಖಾಂತರ, ಫ್ಯಾಕ್ಸ್ ಮುಖಾಂತರ ಅಥವಾ ಮುದ್ದಾಂ ಸಲ್ಲಿಸುವುದು.

7. ಎಲ್ಲಾ ಅಥವಾ ಅತೀ ಮುಖ್ಯವಾದ ವರದಿಗಳನ್ನು ಕಾರ್ಯದರ್ಶಿಗಳು, ರಾಜ್ಯ ಚುನಾವಣಾ ಆಯೋಗ, ಬೆಂಗಳೂರುರವರಿಗೆ ಕಳುಹಿಸತಕ್ಕದ್ದು. ವರದಿಗಳಲ್ಲಿನ ಮಾಹಿತಿಯನ್ನು ರಾಜ್ಯ ಚುನಾವಣಾ ಆಯೋಗಕ್ಕಲ್ಲದೆ ಇತರೆ ಯಾರಿಗೂ ದೊರೆಯದಂತೆ ವೀಕ್ಷಕರು ಎಚ್ಚರವಹಿಸುವುದು.

8. ತುರ್ತು ಸಂದರ್ಭದಲ್ಲಿ ದೂರವಾಣಿ ಮುಖಾಂತರ ಮಾಡಲಾದ ವರದಿಗೆ ಕೂಡಲೆ ಪತ್ರದ ಮುಖೇನ ವರದಿ ಮಾಡುವುದು.

**16. ಉಪ ವಿಭಾಗಾಧಿಕಾರಿ, ತಹಸೀಲ್ದಾರ್, ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ ಹಾಗೂ ಪೊಲೀಸ್ ಇಲಾಖೆ ಯೊಂದಿಗೆ ಸಭೆ:**

ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದ ಚುನಾವಣಾಧಿಕಾರಿ, ಸಹಾಯಕ ಚುನಾವಣಾಧಿಕಾರಿ, ನೋಡಲ್ ಅಧಿಕಾರಿ, ಪೊಲೀಸ್ ಇಲಾಖೆ ಮತ್ತು ವೀಕ್ಷಕರ ಸಭೆಯನ್ನು ನಡೆಸಲು ಕ್ರಮ ಕೈಗೊಳ್ಳುವರು ಹಾಗೂ ವೀಕ್ಷಕರು ವಿಶೇಷ ಗಮನಹರಿಸಬೇಕಾದಂತಹ ನಿರ್ದಿಷ್ಟ ವಿಷಯಗಳ ಕುರಿತು ತಿಳಿಸುವರು.

**17. ಚುನಾವಣಾ ವೀಕ್ಷಕರು ಪರಿವೀಕ್ಷಿಸತಕ್ಕ ಅಂಶಗಳು:**

1. ಅಗತ್ಯವಿರುವಷ್ಟು ಚುನಾವಣಾಧಿಕಾರಿ / ಸಹಾಯಕ ಚುನಾವಣಾಧಿಕಾರಿ ಹಾಗೂ ಸಹಾಯಕ ಸಿಬ್ಬಂದಿಗಳನ್ನು ನಿಯೋಜಿಸಲಾಗಿರುವ ಬಗ್ಗೆ (ಎಣಿಕೆ ಕಾರ್ಯವನ್ನು ಸೇರಿದಂತೆ)
2. ಮಸ್ಟರಿಂಗ್, ಡಿಮಸ್ಟರಿಂಗ್ ಮತ್ತು ಮತ ಎಣಿಕೆ ಕಾರ್ಯಕ್ಕಾಗಿ ಸ್ಥಳ ಮತ್ತು ಕಟ್ಟಡಗಳನ್ನು ಗುರುತಿಸಿರುವ ಬಗ್ಗೆ
3. ಮತಗಟ್ಟೆಗಳ ಪಟ್ಟಿಗಳನ್ನು ಅಂತಿಮಗೊಳಿಸಿರುವ ಬಗ್ಗೆ.

4. ಮಾದರಿ ನೀತಿಸಂಹಿತೆಯನ್ನು ಅನುಷ್ಠಾನಗೊಳಿಸಲು ಹಾಗೂ ಉಸ್ತುವಾರಿಗಾಗಿ ಮಾಡಿರುವ ಕಾರ್ಯವ್ಯವಸ್ಥೆ ಬಗ್ಗೆ.
5. ಮತಗಟ್ಟೆ ಸಿಬ್ಬಂದಿಗಳ ಪಟ್ಟಿಯನ್ನು ತಯಾರಿಸಿರುವ ಬಗ್ಗೆ.
6. ಸಾರ್ವಜನಿಕರಿಂದ ಮತ್ತು ಸ್ಪರ್ಧಿಸುವ ಅಭ್ಯರ್ಥಿಗಳಿಂದ ಮಾಹಿತಿ ಸಂಗ್ರಹಿಸಲು ಕಂಟ್ರೋಲ್ ರೂಂಗಳ ವ್ಯವಸ್ಥೆ ಮತ್ತು ಪೊಲೀಸ್ ಇಲಾಖೆ, ತಹಸೀಲ್ದಾರ್ ಕಚೇರಿ ಮತ್ತು ಚುನಾವಣಾಧಿಕಾರಿಗಳೊಂದಿಗೆ ಆಂತರಿಕ ಸಮನ್ವಯಕ್ಕಾಗಿ ವ್ಯವಸ್ಥೆ ಮಾಡಿರುವ ಬಗ್ಗೆ.

ಚುನಾವಣಾ ವೀಕ್ಷಕರು ಚೆಕ್‌ಲಿಸ್ಟ್ (ಅನುಬಂಧ–1) ಅನ್ನು ಪೂರ್ಣವಾಗಿ ಪರಿಶೀಲಿಸಿದ ನಂತರ ಚುನಾವಣಾ ಸಿದ್ಧತೆ ಬಗ್ಗೆ ಏನಾದರೂ ತೊಡಕು ಇರುವುದನ್ನು ಗಮನಿಸಿದಲ್ಲಿ ಈ ವಿಷಯವನ್ನು ಸಂಬಂಧಪಟ್ಟ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಹಾಗೂ ಆಯೋಗದ ಗಮನಕ್ಕೆ ತರತಕ್ಕದ್ದು.

**18. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿ:**

ಚುನಾವಣಾ ವೀಕ್ಷಕರು ನಾಮಪತ್ರ ಹಿಂತೆಗೆದುಕೊಳ್ಳುವ ಪ್ರಕ್ರಿಯೆ ಮುಗಿದ ನಂತರ ಅಂತಿಮವಾಗಿ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಆಯೋಗದ ಸೂಚನೆಗಳಂತೆ ತಯಾರಿಸಿರುವ ಬಗ್ಗೆ ವೀಕ್ಷಿಸತಕ್ಕದ್ದು. ಒಂದು ವೇಳೆ ಏನಾದರೂ ಗೊಂದಲ ಉಂಟಾದಲ್ಲಿ ಈ ಬಗ್ಗೆ ಚುನಾವಣಾ ವೀಕ್ಷಕರು ಕೂಡಲೇ ತಹಸೀಲ್ದಾರರ ಗಮನಕ್ಕೆ ತರತಕ್ಕದ್ದು ಮತ್ತು ಸಮಸ್ಯೆ ಪರಿಹರಿಸತಕ್ಕದ್ದು.

ಈ ಕೆಳಕಂಡವುಗಳು ಪ್ರಮುಖ ಅಂಶಗಳಾಗಿವೆ.

1. ಆಯೋಗವು ಹೊರಡಿಸಿರುವ ಚುನಾವಣಾ ಚಿಹ್ನೆಗಳ ಪಟ್ಟಿ.
2. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳು ನಾಮಪತ್ರದೊಂದಿಗೆ ಸಲ್ಲಿಸಬೇಕಾದ ಘೋಷಣಾಪತ್ರ ನಮೂನೆಗಳ ಬಗ್ಗೆ ಆಯೋಗದ ಮಾರ್ಗದರ್ಶನಗಳು.
3. ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಚಿಹ್ನೆಯನ್ನು ಹಂಚುವ ಬಗ್ಗೆ ಇತ್ತೀಚಿನ ಸೂಚನೆಗಳು.
4. ಆ ಗ್ರಾಮ ಪಂಚಾಯತಿ ಕ್ಷೇತ್ರಗಳ ದೃಢೀಕೃತ ಮತದಾರರ ಪಟ್ಟಿಗಳು.

ಚುನಾವಣಾ ವೀಕ್ಷಕರು ಚುನಾವಣಾಧಿಕಾರಿಗಳೊಂದಿಗೆ ಚರ್ಚಿಸುವ/ಸಮಾಲೋಚಿಸುವ ಮುನ್ನ ಪ್ರಮುಖವಾಗಿ ಚುನಾವಣಾ ಆಯೋಗವು ನೀಡಿರುವ ಸೂಚನೆಗಳನ್ನು ಮನನ ಮಾಡಿಕೊಂಡಿರತಕ್ಕದ್ದು. ನಂತರ ಅದರಂತೆ ಸಂಬಂಧಿಸಿದ ಚುನಾವಣಾಧಿಕಾರಿಗಳು ಮನದಟ್ಟು ಮಾಡಿಕೊಂಡು ಕಾರ್ಯರೂಪಕ್ಕೆ ತಂದಿರುವ ಬಗ್ಗೆ ದೃಢಪಡಿಸಿಕೊಳ್ಳತಕ್ಕದ್ದು.

**19. ಚಿಹ್ನೆಗಳ ಹಂಚಿಕೆ:**

ನಾಮಪತ್ರಗಳನ್ನು ಹಿಂತೆಗೆದುಕೊಳ್ಳುವ ಪ್ರಕ್ರಿಯೆಯು ಮುಗಿದ ಕೂಡಲೇ ಚಿಹ್ನೆಗಳ ಹಂಚಿಕೆ ಪ್ರಕ್ರಿಯೆಯನ್ನು ಚುನಾವಣಾಧಿಕಾರಿಯು ನಡೆಸತಕ್ಕದ್ದು. ಚುನಾವಣಾಧಿಕಾರಿಯು ಇತ್ತೀಚಿನ ಚುನಾವಣಾ ಚಿಹ್ನೆಗಳ ಪಟ್ಟಿಯನ್ನು ಅನುಸರಿಸಿರುವ ಬಗ್ಗೆ ಪರಿಶೀಲಿಸತಕ್ಕದ್ದು.

ಗ್ರಾಮಪಂಚಾಯಿತಿಗಳ ಚುನಾವಣೆಯು ಪಕ್ಷರಹಿತವಾದ ಚುನಾವಣೆಯಾಗಿರುತ್ತದೆ. ಈ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ರಾಷ್ಟ್ರ ಮತ್ತು ರಾಜ್ಯ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳ ಚಿಹ್ನೆಯನ್ನು ಹಂಚಿಕೆ ಮಾಡಬಾರದು. ಈ ಬಗ್ಗೆ ವೀಕ್ಷಕರು ಗಮನಹರಿಸುವುದು.

ಚಿಹ್ನೆಗಳ ಹಂಚಿಕೆ ಪ್ರಕ್ರಿಯೆಯು ಮುಗಿದ ಕೂಡಲೇ ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಿ ಪ್ರಪತ್ರ–10 ರಲ್ಲಿ ಪ್ರಕಟಿಸತಕ್ಕದ್ದು. ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಹೆಸರನ್ನು ಕ್ರಮವಾಗಿ ಆಯೋಗವು ನಿರ್ದೇಶಿಸಿದ ಮಾದರಿಯಲ್ಲಿಯೇ ನಮೂದಿಸತಕ್ಕದ್ದು ಮತ್ತು ಈ ಪಟ್ಟಿಯು ಅತ್ಯಂತ ಪ್ರಮುಖವಾದುದಾಗಿದ್ದು ಇವುಗಳ ಮೂಲ ಪ್ರತಿಗಳನ್ನು ಆಯೋಗಕ್ಕೆ ಆದಷ್ಟು ಬೇಗನೆ ಕಳುಹಿಸತಕ್ಕದ್ದು.

**20. ಮತದಾರರ ಪಟ್ಟಿ:**

ಗ್ರಾಮ ಪಂಚಾಯತಿಗಳ ಚುನಾವಣೆಗಳಾಗಿರುವುದರಿಂದ ಸ್ಪರ್ಧಿಸಿರುವ ಅಭ್ಯರ್ಥಿಗಳಿಗೆ ಮತದಾರರ ಪಟ್ಟಿಗಳನ್ನು ಉಚಿತವಾಗಿ ನೀಡಲಾಗುವುದಿಲ್ಲ. ಚುನಾವಣೆ ನಿಯಮಗಳ ಪ್ರಕಾರ ಚುನಾವಣಾಧಿಕಾರಿಯವರು ಮತಗಟ್ಟೆಗಳಿಗೆ ಒದಗಿಸಿದ ಮತದಾರರ ಪಟ್ಟಿಯ ಯಥಾಪ್ರತಿಗಳನ್ನು ಅಭ್ಯರ್ಥಿಗಳು ಖರೀದಿಸಿದಾಗ "ನೀಡಲಾಗಿದೆ" ಎಂದು ದೃಢೀಕರಿಸಿಕೊಳ್ಳಬೇಕು.

ಚುನಾವಣೆಯ ದಿನದಂದು ಮತಗಟ್ಟೆಗಳಿಗೆ ಭೇಟಿ ನೀಡಿದಾಗ ಅಭ್ಯರ್ಥಿ ಬಳಿ ಇರುವ ಮತದಾರರ ಪಟ್ಟಿ ಹಾಗೂ ಪ್ರಿಸೈಡಿಂಗ್ ಆಫೀಸರ್ ಬಳಿ ಇರುವ ಮತದಾರರ ಪಟ್ಟಿಗಳು ತಾಳೆ ಇವೆಯೇ ಎಂದು ಪರಿಶೀಲಿಸುವುದು.

**21. ಅಭ್ಯರ್ಥಿಗಳೊಂದಿಗೆ ಸಭೆ ನಡೆಸುವುದು:**

ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕದಂದು ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರರು / ಚುನಾವಣಾಧಿಕಾರಿಗಳು ಕರೆಯುವ ಸ್ಪರ್ಧೆಯಲ್ಲಿರುವ ಅಭ್ಯರ್ಥಿಗಳ ಸಭೆಯಲ್ಲಿ ಭಾಗವಹಿಸಬೇಕು ಸಭೆಯಲ್ಲಿ ಈ ಕೆಳಕಾಣಿಸಿರುವ ಅಂಶಗಳ ಬಗ್ಗೆ ತಿಳುವಳಿಕೆ ನೀಡುವುದು.

1. ಮಾದರಿ ನೀತಿ ಸಂಹಿತೆ ಪಾಲನೆ ಬಗ್ಗೆ ಪ್ರಮುಖ ವಿಷಯಗಳು
2. ಸಾರ್ವಜನಿಕ ಸಭೆ/ಸಮಾರಂಭ, ಮೆರವಣಿಗೆಗಳಿಗೆ ಹಾಗೂ ವಾಹನಗಳಿಗೆ ಅನುಮತಿ ಪಡೆಯುವ ಬಗ್ಗೆ.

3. ಚುನಾವಣೆ ನೀತಿ ಸಂಹಿತೆ ಕಾಯ್ದೆ, ಕಾನೂನುಗಳನ್ನು ಉಲ್ಲಂಘಿಸಿದಲ್ಲಿ ತೆಗೆದುಕೊಳ್ಳಲಿರುವ ಕ್ರಮಗಳ ಬಗ್ಗೆ.
4. ಅಭ್ಯರ್ಥಿಗಳೊಂದಿಗೆ ನಿಗದಿಪಡಿಸಿರುವ/ ನಿರ್ದಿಷ್ಟಪಡಿಸುವ ಸಭೆಯ ವೇಳೆ, ಸ್ಥಳ ಹಾಗೂ ಸಂಪರ್ಕಿಸುವ ದೂರವಾಣಿ ಸಂಖ್ಯೆ. ಇತ್ಯಾದಿ ಬಗ್ಗೆ.
5. ಮತದಾರರ ಪಟ್ಟಿಗಳು
6. ಅಭ್ಯರ್ಥಿಗಳು, ಯಾವುದಾದರೂ ಮತಗಟ್ಟೆಗಳಲ್ಲಿ ನಿಯಮ ಉಲ್ಲಂಘನೆ, ಚುನಾವಣೆ ಅಕ್ರಮ, ಗಲಭೆ ನಡೆಯುವ ಬಗ್ಗೆ ಗುಮಾನಿ ಇದ್ದಲ್ಲಿ ಅದನ್ನು ವೀಕ್ಷಕರ ಗಮನಕ್ಕೆ ತರಬಹುದು.

**22. ಚುನಾವಣಾ ಕ್ಷೇತ್ರಗಳಿಗೆ ಹಾಗೂ ಮತಗಟ್ಟೆಗಳಿಗೆ ಭೇಟಿ:**

ಸ್ಪರ್ಧಿಸುವ ಅಭ್ಯರ್ಥಿಗಳ ಪಟ್ಟಿಯನ್ನು ಚುನಾವಣಾಧಿಕಾರಿ ಸಿದ್ಧಗೊಳಿಸಿದ ನಂತರ ಚುನಾವಣಾ ವೀಕ್ಷಕರು ಸಾಧ್ಯವಿರುವಷ್ಟು ಹೆಚ್ಚಿನ ಮತಗಟ್ಟೆಗಳಿಗೆ ಭೇಟಿ ನೀಡಿ ಅಲ್ಲಿನ ಸಾಮಾಜಿಕ, ಹಣದ ವಹಿವಾಟು ನಡೆಯುತ್ತಿರುವ ಇತ್ಯಾದಿ ಚುನಾವಣಾ ವಿದ್ಯಮಾನಗಳ ಬಗ್ಗೆ ನಿಗಾವಹಿಸುವುದು. ಹೊಸದಾಗಿ ಸ್ಥಾಪಿತವಾಗಿರುವ ಎಲ್ಲಾ ಮತಗಟ್ಟೆಗಳಿಗೆ ಹಾಗೂ ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳಿಗೆ ತಪ್ಪದೇ ಭೇಟಿ ನೀಡಿ ಪರಿಶೀಲಿಸುವುದು.

**23. ಕಾನೂನು ಸುವ್ಯವಸ್ಥೆ ಪಾಲನೆಗೆ ಮಾಡಿಕೊಂಡಿರುವ ತಯಾರಿಗಳ ಬಗ್ಗೆ ಸಮಗ್ರ ಪರಿಶೀಲನೆ:**

ಚುನಾವಣಾ ವೀಕ್ಷಕರು ಅವರ ಕಾರ್ಯವ್ಯಾಪ್ತಿಯ ಕ್ಷೇತ್ರಕ್ಕೆ ಆಗಮಿಸಿದ 3-4 ದಿನಗಳೊಳಗಾಗಿ ಸಂಬಂಧಿಸಿದ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಇಬ್ಬರಿಗೂ ಅನುಕೂಲವಾಗುವ ಸಮಯದಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ವಿವರವಾಗಿ ಚರ್ಚಿಸುವುದು.

1. ಅಗತ್ಯವಿರುವಷ್ಟು ಪೊಲೀಸ್ ಸಿಬ್ಬಂದಿಯ ಲಭ್ಯತೆ
2. ಕೇಂದ್ರ ಮೀಸಲು ಪಡೆ ಅಗತ್ಯತೆ ಬಗ್ಗೆ
3. ಕೈಗೊಂಡಿರುವ ಮುಂಜಾಗರೂಕತೆ ಕ್ರಮಗಳು (ಪ್ರತಿಬಂಧಕ ಸ್ಥಾನ ಬದ್ಧತೆಯಲ್ಲಿರುವ ವ್ಯಕ್ತಿಗಳ ಪಟ್ಟಿ, ಶಸ್ತ್ರಾಸ್ತ್ರಗಳನ್ನು ಪೊಲೀಸ್ ಠಾಣೆಗೆ ಒಪ್ಪಿಸಿರುವ ಬಗ್ಗೆ)
4. ಗುರುತಿಸಿರುವ ವಲ್ನರಬಲ್ ಪ್ರದೇಶಗಳು /ಮತಗಟ್ಟೆಗಳು
5. ಮತದಾನ ದಿನದಂದು ಪೊಲೀಸ್ ಸಿಬ್ಬಂದಿಯ ನಿಯೋಜನೆಯ ಕಾರ್ಯಯೋಜನೆ
6. ಮತದಾನ ದಿನದಂದು ಮತಪೆಟ್ಟಿಗೆಗಳ/ವಿದ್ಯುನ್ಮಾನ ಮತಯಂತ್ರಗಳ ಸಾಗಣೆ, ಇತ್ಯಾದಿ.

ವಲ್ನರಬಲ್ ಪ್ರದೇಶಗಳನ್ನು ಗುರುತಿಸಿರುವ ಬಗ್ಗೆ ಹಾಗೂ ಮತಗಟ್ಟೆಗಳಿಗೆ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸುವ ಕಾರ್ಯಯೋಜನೆ ಹಾಗೂ ಪೊಲೀಸ್ ಗಸ್ತು ಬಗ್ಗೆ ಬೇಕಾಗುವ ಹೆಚ್ಚುವರಿ ಪೊಲೀಸ್ ಸಿಬ್ಬಂದಿ ಕುರಿತು ಪರಾಮರ್ಶಿಸುವುದು. ಕ್ಷೇತ್ರಗಳಲ್ಲಿನ ಬಾರ್, ಲಿಕ್ಕರ್ ಶಾಪ್‌ಗಳಲ್ಲಿ ದಾಸ್ತಾನಿನ

ಬಗ್ಗೆ ಪರಿಶೀಲಿಸಿ ಚುನಾವಣೆ ಸಮಯದಲ್ಲಿ ಏನಾದರೂ ಹೆಚ್ಚುವರಿ ದಾಸ್ತಾನು, ವಿತರಣೆ ಮಾಡಿದ್ದಾರೆಯೆ ಎಂಬುದನ್ನು ಪರಿಶೀಲಿಸುವುದು.

**24. ಮಾದರಿ ನೀತಿ ಸಂಹಿತೆ ಅನುಷ್ಠಾನದ ಬಗ್ಗೆ ಪರಿವೀಕ್ಷಣೆ:**

ಮಾದರಿ ನೀತಿ ಸಂಹಿತೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳ್ಳುವುದನ್ನು ಖಾತ್ರಿಪಡಿಸುವುದು ಚುನಾವಣಾ ವೀಕ್ಷಕರ ಅತೀ ಪ್ರಮುಖ ಹಾಗೂ ಮಹತ್ವದ ಕಾರ್ಯವಾಗಿದೆ.

ನೀವು ಕಟ್ಟುನಿಟ್ಟಿನ ನಿಗಾವಹಿಸಬೇಕಾದವುಗಳೆಂದರೆ,

1. ಪರವಾನಗಿ ಇಲ್ಲದೆ ವಾಹನಗಳನ್ನು ಚುನಾವಣೆ ಪ್ರಚಾರಕ್ಕೆ ಬಳಸುತ್ತಿರುವುದು.
2. ತೋಳ್ಬಲ ಉಪಯೋಗಿಸಿ ಮತದಾರರನ್ನು ಬೆದರಿಸುವುದು ಹಾಗೂ ಮತಚಲಾಯಿಸದಂತೆ ನಿರ್ಬಂಧಿಸುವುದು.
3. ಮತದಾರರನ್ನು ಸೆಳೆಯಲು ಹಣ, ಲಿಕ್ಕರ್ ಹಂಚಿಕೆ ಹಾಗೂ ಕಾಣಿಕೆ/ಉಡುಗೊರೆಗಳನ್ನು ನೀಡುವುದು.
4. ಮತದಾರರಲ್ಲಿ ಮತಬೇಧ ಉಂಟು ಮಾಡುವಂತಹ ಉದ್ರೇಕಕಾರಿ/ ಆಕ್ಷೇಪಣಾರ್ಹ ಭಾಷಣಗಳು, ಕೃತ್ಯಗಳು.
5. ಸಾರ್ವಜನಿಕ/ ಖಾಸಗಿ ಆಸ್ತಿ/ ಕಟ್ಟಡ ಇತ್ಯಾದಿಗಳನ್ನು ವಿರೂಪಗೊಳಿಸುವುದು.

**25. ಮಾದರಿ ನೀತಿ ಸಂಹಿತೆಯನ್ನು ಜಾರಿಗೊಳಿಸಲು ಚುನಾವಣಾ ವೀಕ್ಷಕರ ಪಾತ್ರ:**

ಚುನಾವಣಾ ನೀತಿ ಸಂಹಿತೆಯನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸುವಂತೆ ಚುನಾವಣಾಧಿಕಾರಿಗಳಿಗೆ/ ಜಿಲ್ಲಾ ಚುನಾವಣಾಧಿಕಾರಿಗಳಿಗೆ ಸೂಚಿಸಲಾಗಿದೆ. ಚುನಾವಣಾ ವೀಕ್ಷಕರು ನೀತಿ ಸಂಹಿತೆ ಉಲ್ಲಂಘನೆ ದೂರುಗಳನ್ನು ಜಿಲ್ಲಾ ಚುನಾವಣಾಧಿಕಾರಿ/ಚುನಾವಣಾಧಿಕಾರಿ/ತಹಸೀಲ್ದಾರ್‌ಗಳ ಮೂಲಕ ಹಾಗೂ ಸ್ವತ: ತನಿಖೆ ನಡೆಸುವುದು. ನೀತಿ ಸಂಹಿತೆ ಉಲ್ಲಂಘನೆ ಘಟನೆಗಳನ್ನು ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಸೂಕ್ತ ಸಲಹೆ/ ಸೂಚನೆಗಳನ್ನು ನೀಡುವುದು. ಸೂಚನೆಗಳನ್ನು ನೀಡಿದ್ದರೂ ನೀತಿ ಸಂಹಿತೆ ಉಲ್ಲಂಘನೆ ಘಟನೆಗಳು ಮುಂದುವರೆದಲ್ಲಿ/ ಮರುಕಳಿಸಿದಲ್ಲಿ ತಕ್ಷಣ ಅಂತಹ ಘಟನೆಗಳನ್ನು ವಿಡಿಯೋಗ್ರಫಿ ಮಾಡಿಸುವುದು ಹಾಗೂ ಆಯೋಗಕ್ಕೆ ವರದಿ ಮಾಡುವುದು.

ಕೆಲವು ನಿರ್ದೇಶನಗಳನ್ನು ತಮ್ಮ ಮಾಹಿತಿಗಾಗಿ ಈ ಕೆಳಗೆ ನೀಡಲಾಗಿದೆ.

1. ಪರವಾನಗಿ ಇಲ್ಲದೆ ವಾಹನದಲ್ಲಿ ಬ್ಯಾನರ್/ಬಾವುಟದೊಂದಿಗೆ ಚುನಾವಣಾ ಪ್ರಚಾರ ಮಾಡುತ್ತಿರುವುದು ಹಾಗೂ ರಾಜಕೀಯ ನಾಯಕರ ಭಾವಚಿತ್ರ ಮತ್ತು ಚಿಹ್ನೆ ಅಥವಾ ಲಾಂಛನವನ್ನು ಬಳಸಿ ಪ್ರಚಾರ ಮಾಡುತ್ತಿರುವ ಬಗ್ಗೆ ತಮ್ಮ ಗಮನಕ್ಕೆ ಬಂದಕೂಡಲೇ ಅಂತಹ ವಾಹನವನ್ನು ಮತ್ತು ವಾಹನದಲ್ಲಿದ್ದವರನ್ನು ದಸ್ತಗಿರಿ ಮಾಡುವಂತೆ ಕೂಡಲೇ

ಸಂಬಂದಿಸಿದ ಪೊಲೀಸ್ ಅಧಿಕಾರಿಗೆ ಜಿಲ್ಲಾ ಚುನಾವಣಾಧಿಕಾರಿಗಳು / ಚುನಾವಣಾಧಿಕಾರಿಗಳು ಸೂಚಿಸುವುದು. ಇಂತಹ ಘಟನೆಗಳು ಮರುಕಳಿಸದಂತೆ ತಡೆಯಲು ಜಿಲ್ಲಾ ಚುನಾವಣಾಧಿಕಾರಿಗಳು / ಚುನಾವಣಾಧಿಕಾರಿಗಳು / ತಹಸೀಲ್ದಾರರುಗಳು ಯಾವುದೇ ವೆಚ್ಚ ಬಾರದಂತೆ ಸುದ್ದಿಮಾಧ್ಯಮದ ಮೂಲಕ ನೀತಿ ಸಂಹಿತೆ ಉಲ್ಲಂಘನೆ ಘಟನೆಗಳ ವಿರುದ್ಧ ಕೈಗೊಂಡ ಕ್ರಮದ ಬಗ್ಗೆ ಸಾಕಷ್ಟು ಪ್ರಚಾರ ನೀಡುವುದು.

2. ಯಾವುದೋ ಒಂದು ಪ್ರದೇಶದಲ್ಲಿ ಅಕ್ರಮವಾಗಿ ಶಸ್ತ್ರಾಸ್ತ್ರಗಳನ್ನು ದಾಸ್ತಾನು ಮಾಡಿರುವುದಾಗಿ ದೂರುತ್ತಾರೆ. ಆದರೆ ದಾಸ್ತಾನು ಮಾಡಿರುವ ನಿರ್ದಿಷ್ಟ ಸ್ಥಳವನ್ನು ತಿಳಿಸುವುದಿಲ್ಲ. ಪೊಲೀಸ್ ದಾಳಿ ನಡೆಸುವಂತೆ ಒತ್ತಾಯಿಸುತ್ತಾರೆ. ಅಂತಹ ಸಂದರ್ಭದಲ್ಲಿ ವೀಕ್ಷಕರು ದೂರನ್ನು ಸ್ವೀಕರಿಸಿ ಗೌಪ್ಯವಾಗಿ ಸಂಬಂಧಿಸಿದ ಪೊಲೀಸ್ ಅಧಿಕಾರಿಗೆ ದಾಳಿ ನಡೆಸುವಂತೆ ಸೂಚಿಸುವುದು ಹಾಗೂ ವರದಿ ಸಲ್ಲಿಸುವಂತೆ ತಿಳಿಸುವುದು. ಅವರೊಂದಿಗೆ ವಿಡಿಯೋಗ್ರಾಫರ್‌ನನ್ನು ಜೊತೆಯಲ್ಲಿ ಕಳುಹಿಸಿ, ದಾಳಿ ಸಂದರ್ಭದ ವಿಡಿಯೋಚಿತ್ರಣ ಮಾಡಿಸುವುದು. ಇಂತಹ ಸಂದರ್ಭಗಳಲ್ಲಿ ವೀಕ್ಷಕರು ಯೋಚಿಸಿ ಸ್ವಯಂ ನಿರ್ಧಾರ ಕೈಗೊಳ್ಳಬೇಕು.

3. ಯಾವುದೇ ಅಭ್ಯರ್ಥಿಯು ಉದ್ರೇಕಕಾರಿಯಾದ ಸಮಾಜದ ಒಂದು ನಿರ್ದಿಷ್ಟ ಜನಾಂಗದ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಪ್ರಚಾರ/ಭಾಷಣ ಮಾಡಿರುವುದನ್ನು ಮಾಧ್ಯಮದವರು ಪ್ರಕಟಿಸಿದರೆ ಇಂತಹ ಘಟನೆಗಳನ್ನು / ಭಾಷಣಗಳನ್ನು ವಿಡಿಯೋಗ್ರಫಿ ಮಾಡಿದ್ದಲ್ಲಿ ಅದರ ಪ್ರತಿಯೊಂದಿಗೆ ಆಯೋಗಕ್ಕೆ ವರದಿ ಮಾಡುವುದು.

4. ಪೋಸ್ಟರನ್ನು ಅಂಟಿಸಿ ಹಾಗೂ ಬ್ಯಾನರ್‌ಗಳನ್ನು ಕಟ್ಟಿ ಸಾರ್ವಜನಿಕ ಆಸ್ತಿಯನ್ನು ವಿರೂಪಗೊಳಿಸಿರುವುದನ್ನು ನೀವು ಕಂಡಲ್ಲಿ, ಇದು ತೀವ್ರವಾದ ನೀತಿ ಸಂಹಿತೆ ಉಲ್ಲಂಘನೆಯಾದುದರಿಂದ ತಕ್ಷಣ ತಹಸೀಲ್ದಾರರ ಮೂಲಕ ಚುನಾವಣಾಧಿಕಾರಿಗಳಿಗೆ ವಿಷಯ ತಿಳಿಸಿ, ಅಂತಹ ಪೋಸ್ಟರ್ ಬ್ಯಾನರ್‌ಗಳನ್ನು ಗ್ರಾಮ ಪಂಚಾಯತಿ ಕಾರ್ಯದರ್ಶಿ ಮೂಲಕ ತೆರವುಗೊಳಿಸಲು ಕ್ರಮವಹಿಸುವುದು.

ನೀತಿಸಂಹಿತೆ ಉಲ್ಲಂಘನೆಗಳ ಬಗ್ಗೆ ಸಮಯೋಚಿತವಾಗಿ ಸೂಕ್ತ ಕ್ರಮಕೈಗೊಳ್ಳುವುದನ್ನು ಹಾಗೂ ಕೈಗೊಂಡ ಕ್ರಮಗಳನ್ನು ವರದಿ ಮಾಡುವುದನ್ನು ಆಯೋಗ ನಿರೀಕ್ಷಿಸುತ್ತದೆ.

**26. ಚುನಾವಣಾ ಭ್ರಷ್ಟಾಚಾರಗಳು:**

ಹಣಬಲವು ಚುನಾವಣೆಯನ್ನು ಕಲುಷಿತಗೊಳಿಸುತ್ತದೆ. ಆದುದರಿಂದ ಮತದಾರರನ್ನು ಸೆಳೆಯುವ ಉದ್ದೇಶದಿಂದ, ಗುಟ್ಟಾಗಿ ಹಾಗೂ ಅನೇಕ ವಾಮಮಾರ್ಗಗಳನ್ನು ಅಭ್ಯರ್ಥಿಗಳು ಅನುಸರಿಸುತ್ತಾರೆ. ಈ

ಕೆಳಗೆ ನೀಡಿರುವ ಮಾರ್ಗಗಳು ಒಂದು ಮಾರ್ಗಸೂಚಿ ಮಾತ್ರ ಬೇರೆ ಬೇರೆ ವಿವಿಧ ಮಾರ್ಗಗಳ ಬಗ್ಗೆಯೂ ವೀಕ್ಷಕರು ಯೋಚಿಸಿ ಯುಕ್ತ ಕ್ರಮ ತೆಗೆದುಕೊಳ್ಳತಕ್ಕದ್ದು.

1. ಮತಗಳನ್ನು ಸೆಳೆಯಲು ಮತಗಟ್ಟೆವಾರು ಏಜೆಂಟರುಗಳ ಮೂಲಕ ಹಣ ಪಾವತಿಸುವುದು.
2. ಕ್ಲಬ್‌ಗಳು ಮತ್ತು ಸಂಸ್ಥೆಗಳಿಗೆ ಅವುಗಳ ಸದಸ್ಯರುಗಳ ಮತ ಸೆಳೆಯಲು ದೊಡ್ಡಮೊತ್ತದ ದೇಣಿಗೆ ನೀಡುವುದು.
3. ಮತದಾರರಿಗೆ ನೀಡುವುದಕ್ಕಾಗಿ ಸ್ಥಳೀಯ ಮುಖಂಡರಿಗೆ ಉದಾರ ಕೊಡುಗೆ ನೀಡುವುದು
4. ಸಭೆಗಳಿಗೆ ಸಾರ್ವಜನಿಕರನ್ನು ಹಣ ನೀಡಿ ಕರೆತರುವುದು.
5. ಹಣ ನೀಡಿ ಜನ ಕರೆತಂದು ಮೆರವಣಿಗೆ, ಪ್ರಚಾರ ನಡೆಸುವುದು.
6. ಅಭ್ಯರ್ಥಿಗಳು ಸಾಮೂಹಿಕ ವಿವಾಹ, ಪೂಜೆ, ಉದ್ಘಾಟನೆ ಇತ್ಯಾದಿಗಳಲ್ಲಿ ಭಾಗವಹಿಸಿ ಮತದಾರರಿಗೆ ಅಥವಾ ಸಾರ್ವಜನಿಕರಿಗೆ ಉಡುಗೊರೆಗಳನ್ನು ನೀಡುವುದು.
7. ಅಭ್ಯರ್ಥಿಗಳು ಚಾರಿಟಿ ಸಂಸ್ಥೆ ಅಥವಾ ವಿದ್ಯಾ ಸಂಸ್ಥೆಗಳಲ್ಲಿ ಸನ್ಮಾನ ಪಡೆಯುವುದು.
8. ಮತದಾರರಿಗೆ ಲಿಕ್ಕರ್ ಅಥವಾ ಲಿಕ್ಕರ್‌ಪಾಸುಗಳನ್ನು ವಿತರಿಸುವುದು.
9. ಚುನಾವಣೆಗೆ ಡಮ್ಮಿ ಅಭ್ಯರ್ಥಿಯನ್ನು ನಿಲ್ಲಿಸಿ ಅವರ ವಾಹನ ಇತ್ಯಾದಿ ಸೌಲಭ್ಯಗಳನ್ನು ತಮ್ಮ ಉಪಯೋಗಕ್ಕೆ ಪಡೆಯುವುದು.
10. ಸಂಬಂಧವಿಲ್ಲದ ವ್ಯಕ್ತಿಗಳ ಹೆಸರಿನಲ್ಲಿ ಚುನಾವಣಾ ಪ್ರಚಾರಕ್ಕಾಗಿ ಮಾಧ್ಯಮ ಬಳಸುವುದು, ಕರಪತ್ರ ಇತ್ಯಾದಿ ಹಂಚುವುದು.
11. ಸಿನಿಮಾ ತಾರೆಯರನ್ನು ಹಾಗೂ ಕ್ರೀಡಾ ಪಟುಗಳನ್ನು ಕರೆಯಿಸಿ ಪ್ರಚಾರ ಮಾಡುವುದು.
12. ಮತದಾರರಿಗೆ ಉಚಿತವಾಗಿ ಕೊಡೆ, ಟೋಪಿ, ಸೈಕಲ್, ವಾಚು ಇತ್ಯಾದಿ ಉಡುಗೊರೆ ನೀಡುವುದು.

ಆಯೋಗವು ನೀಡಿರುವ ಮಾರ್ಗ ಸೂಚಿಗಳನ್ನು ಯಾವುದೇ ಲೋಪವಿಲ್ಲದಂತೆ ಕಟ್ಟು ನಿಟ್ಟಾಗಿ ಪಾಲಿಸುವುದು ಚುನಾವಣಾ ಸಿಬ್ಬಂದಿಗಳ ಕರ್ತವ್ಯವಾಗಿರುತ್ತದೆ. ಆದುದರಿಂದ ನೀವು ಆಯೋಗವು ಸಿದ್ದಪಡಿಸಿರುವ ರಿಟರ್ನಿಂಗ್ ಅಧಿಕಾರಿಗಳ ಕೈಪಿಡಿ, ಪ್ರಿಸೈಡಿಂಗ್ ಅಧಿಕಾರಿಗಳ ಕೈಪಿಡಿಗಳನ್ನು ಮನನ ಮಾಡಿಕೊಳ್ಳುವುದು.

**27. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು :**

1. ಚುನಾವಣಾ ಪ್ರಕ್ರಿಯೆಗಳ ವೀಕ್ಷಣೆಗಾಗಿ ತಮ್ಮ ಕೆಲಸ ಕಾರ್ಯಗಳಿಗೆ ನೆರವಾಗಲು ಆಯೋಗದ ಸೂಚನೆಯಂತೆ ಜಿಲ್ಲಾಧಿಕಾರಿಗಳು ತಾಲ್ಲೂಕಿಗೆ ಒಬ್ಬರಂತೆ ಜಿಲ್ಲಾ ಮಟ್ಟದ ಅಧಿಕಾರಿಯನ್ನು ತಾಲ್ಲೂಕು ಉಸ್ತುವಾರಿ ಅಧಿಕಾರಿಗಳಾಗಿ ನೇಮಕ ಮಾಡಿರುತ್ತಾರೆ. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ನೇರವಾಗಿ ತಮ್ಮ ಅಧೀನದಲ್ಲಿ ಕರ್ತವ್ಯವನ್ನು ನಿರ್ವಹಿಸುತ್ತಾರೆ.

2. ಚುನಾವಣಾ ವೀಕ್ಷಕರು ತಮ್ಮ ವ್ಯಾಪ್ತಿಗೆ ಬರುವ ತಾಲ್ಲೂಕುಗಳಿಗೆ ನೇಮಕ ಮಾಡಿರುವ ತಾಲ್ಲೂಕು ಉಸ್ತುವಾರಿ ಅಧಿಕಾರಿಗಳ ವಿವರಗಳನ್ನು ಸಂಬಂಧಿಸಿದ ಜಿಲ್ಲಾಧಿಕಾರಿಗಳು/ ಉಪವಿಭಾಗಾಧಿಕಾರಿ/ ತಹಸೀಲ್ದಾರರಿಂದ ಪಡೆದುಕೊಳ್ಳುವುದು.
3. ಚುನಾವಣಾ ವೀಕ್ಷಕರು ತಮ್ಮ ವ್ಯಾಪ್ತಿಗೆ ಬರುವ ಎಲ್ಲಾ ತಾಲ್ಲೂಕು ಉಸ್ತುವಾರಿ ಅಧಿಕಾರಿಗಳ ಸಭೆಯನ್ನು ನಡೆಸಿ ತಾಲ್ಲೂಕಿನಲ್ಲಿ ಚುನಾವಣೆ ಪ್ರಕ್ರಿಯೆಗಳು ಸುಗಮವಾಗಿ ನಡೆಯುತ್ತಿರುವ ಬಗ್ಗೆ ವರದಿಗಳನ್ನು ಚುನಾವಣಾ ವೀಕ್ಷಕರಿಗೆ ಮಾತ್ರ ಸಲ್ಲಿಸುವಂತೆ ಸೂಕ್ತ ಸೂಚನೆಗಳನ್ನು ನೀಡುವುದು.
4. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿ ಇದ್ದು ಆಯಾ ತಾಲ್ಲೂಕಿನ ಎಲ್ಲಾ ಗ್ರಾಮಪಂಚಾಯಿತಿಗಳ ವ್ಯಾಪ್ತಿಯಲ್ಲಿ ಪ್ರವಾಸ ಮಾಡುತ್ತಿರುವ ಬಗ್ಗೆ ಮತ್ತು ಚುನಾವಣಾ ಪ್ರಕ್ರಿಯೆಗಳ ಬಗ್ಗೆ ಪರಿಶೀಲನೆ ನಡೆಸುತ್ತಿರುವ ಬಗ್ಗೆ ಚುನಾವಣಾ ವೀಕ್ಷಕರು ನಿಗಾವಹಿಸತಕ್ಕದ್ದು. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಈ ಸಂಬಂಧ ದಿನಚರಿಯನ್ನು ನಿರ್ವಹಿಸುತ್ತಿರುವ ಬಗ್ಗೆಯೂ ಪರಿಶೀಲನೆಯನ್ನು ನಡೆಸತಕ್ಕದ್ದು.
5. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಸಲ್ಲಿಸುವ ವರದಿಯಲ್ಲಿ ಅವರ ದಿನಚರಿ ಮತ್ತು ಅವರು ಪ್ರತಿದಿನ ಯಾವ ಯಾವ ಕ್ಷೇತ್ರಗಳಲ್ಲಿ ಪ್ರವಾಸ ಮಾಡಿದರು ಎಂಬ ಬಗ್ಗೆ ವಿವರಗಳನ್ನು ಒಳಗೊಂಡಿರತಕ್ಕದ್ದು.
6. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಆ ತಾಲ್ಲೂಕಿನ ಎಲ್ಲಾ ಗ್ರಾಮ ಪಂಚಾಯಿತಿಗಳ ರಿಟರ್ನಿಂಗ್ ಅಧಿಕಾರಿಗಳೊಂದಿಗೆ ಸತತ ಸಂಪರ್ಕದಲ್ಲಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳತಕ್ಕದ್ದು.
7. ತಾಲ್ಲೂಕು ಉಸ್ತುವಾರಿ ಅಧಿಕಾರಿ ಸಂಬಂಧಿಸಿದ ತಾಲ್ಲೂಕಿನಲ್ಲಿ ನಿಗದಿಪಡಿಸಿದ ಸಮಯದಲ್ಲಿ ಲಭ್ಯವಿರಬೇಕು.
8. ತಾಲ್ಲೂಕು ಉಸ್ತುವಾರಿ ಅಧಿಕಾರಿಯ ಕರ್ತವ್ಯಗಳು ನಾಮಪತ್ರ ಸ್ವೀಕಾರದಿಂದ ಪ್ರಾರಂಭವಾಗುತ್ತದೆ.
9. ತಾಲ್ಲೂಕು ಉಸ್ತುವಾರಿ ಅಧಿಕಾರಿ ಚುನಾವಣಾ ಕ್ಷೇತ್ರದೊಳಗೆ ಚುನಾವಣಾ ಪ್ರಾರಂಭದಿಂದ ಮತಗಳ ಎಣಿಕೆ ಕಾರ್ಯ ಮುಗಿಯುವವರೆವಿಗೂ ಲಭ್ಯವಿರಬೇಕು.
10. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ವಾರದಲ್ಲಿ ಕನಿಷ್ಠ ಎರಡು ಬಾರಿ ಚುನಾವಣೆಗಳಿಗೆ ಸಂಬಂಧಿಸಿದಂತೆ ವರದಿಗಳನ್ನು ಚುನಾವಣಾ ವೀಕ್ಷಕರಿಗೆ ಸಲ್ಲಿಸತಕ್ಕದ್ದು.
11. ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ನೀಡುವ ವರದಿಗಳನ್ನು ವೀಕ್ಷಕರು ಪರಿಶೀಲಿಸಿ ಯಾವುದೇ ನ್ಯೂನತೆಗಳು ಇದ್ದಲ್ಲಿ ತಾಲ್ಲೂಕು ಉಸ್ತುವಾರಿ ಅಧಿಕಾರಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವುದು.
12. ವೀಕ್ಷಕರ ಸೂಚನೆಯನ್ವಯ ತಾಲ್ಲೂಕು ಉಸ್ತುವಾರಿ ಅಧಿಕಾರಿಗಳು ಕಾರ್ಯ ನಿರ್ವಹಿಸುವುದು.

**28. ಮತಗಟ್ಟೆ ಸಿಬ್ಬಂದಿ ನೇಮಕಾತಿ, ತರಬೇತಿ ಮತ್ತು ತಯಾರಿ:**

ಮತಗಟ್ಟೆವಾರು ಮತಗಟ್ಟೆ ಸಿಬ್ಬಂದಿಗಳನ್ನು ಆಯೋಗವು ನೀಡಿರುವ ನಿರ್ದೇಶನದಂತೆ ರ್‍ಯಾಂಡಮೈಸೇಷನ್ ಕ್ರಮವನ್ನು ಅನುಸರಿಸಿ ಹಂಚಿಕೆ ಮಾಡಲಾಗಿರುವ ಬಗ್ಗೆ ಮತ್ತು ಅವಶ್ಯಕವಿರುವಷ್ಟು

ಸಂಖ್ಯೆಯ ಸಿಬ್ಬಂದಿಯನ್ನು ಈಗಾಗಲೇ ಗುರುತಿಸಿ ನಿಯೋಜಿಸಲು ಕ್ರಮ ಕೈಗೊಂಡಿರುವ ಬಗ್ಗೆ ಪರಿಶೀಲಿಸತಕ್ಕದ್ದು.

ಮತಗಟ್ಟೆಗಳಿಗೆ ನೇಮಕ ಮಾಡುವ ಸಿಬ್ಬಂದಿಗಳಿಗೆ ಅವರು ನಿರ್ವಹಿಸಬೇಕಾದ ಕರ್ತವ್ಯಗಳ ಕುರಿತು ಸಾಕಷ್ಟು ತಿಳುವಳಿಕೆ ನೀಡುವ ಸಲುವಾಗಿ ಅವರಿಗೆ ತರಬೇತಿಯನ್ನು ನೀಡುವುದು ಅವಶ್ಯಕವಾಗಿರುತ್ತದೆ. ಚುನಾವಣಾ ವೀಕ್ಷಕರು ಮತಗಟ್ಟೆ ಸಿಬ್ಬಂದಿಗಳ ತರಬೇತಿ ಬಗ್ಗೆ ನಿಗಾ ವಹಿಸತಕ್ಕದ್ದು. ಈ ಮತಗಟ್ಟೆ ಸಿಬ್ಬಂದಿ ತರಬೇತಿಗೆ ಸಂಬಂಧಿಸಿದಂತೆ ಈ ಕೆಳಕಂಡ ಅಂಶಗಳ ಬಗ್ಗೆ ಗಮನಿಸತಕ್ಕದ್ದು.

1. ಎಲ್ಲಾ ಮತಗಟ್ಟೆ ಸಿಬ್ಬಂದಿಗೂ ಅವಶ್ಯಕ ತರಬೇತಿ ನೀಡಿರುವ ಬಗ್ಗೆ.
2. ಮತಗಟ್ಟೆ ಸಿಬ್ಬಂದಿಗೆ ತರಬೇತಿ ನೀಡುವ ತರಬೇತುದಾರರು ಚುನಾವಣಾ ವಿಷಯದಲ್ಲಿ ಸಾಕಷ್ಟು ಅನುಭವ ಹೊಂದಿರುವವರಾಗಿರತಕ್ಕದ್ದು.
3. ತರಬೇತಿಯನ್ನು ಕಡಿಮೆ ಸಂಖ್ಯೆಯಲ್ಲಿ ಗುಂಪುಗಳಾಗಿ ಮಾಡಿ ನೀಡತಕ್ಕದ್ದು. ಹೆಚ್ಚಿನ ಸಂಖ್ಯೆಯಲ್ಲಿ ಗುಂಪುಗಳಾಗಿ ಮಾಡಿ ತರಬೇತಿ ನೀಡಿದಲ್ಲಿ ತರಬೇತಿಯು ಅಷ್ಟು ಪರಿಣಾಮಕಾರಿಯಾಗುವುದಿಲ್ಲ.
4. ಮತಗಟ್ಟೆ ಸಿಬ್ಬಂದಿಯು ಆಯೋಗದ ನಿರ್ದೇಶನದಂತೆ ಮತದಾನದ ನಿರ್ವಹಣೆ ಮಾಡುವ ಬಗ್ಗೆ, ಮತಪೆಟ್ಟಿಗೆ/ವಿದ್ಯುನ್ಮಾನ ಮತಯಂತ್ರ ಬಳಕೆಯ ಬಗ್ಗೆ, ನಮೂನೆ ಮತ್ತು ಲಕೋಟೆಗಳನ್ನು ಸಿಬ್ಬಂದಿಯು ಭರ್ತಿ ಮಾಡುವ ಬಗ್ಗೆ ತರಬೇತಿಯನ್ನು ನೀಡತಕ್ಕದ್ದು.

**29. ಮತದಾನ ದಿನಾಂಕಕ್ಕೆ ಸಂಬಂಧಿಸಿದ ತಯಾರಿ:**

ಮತಗಟ್ಟೆಗಳ ವಶಪಡಿಸಿಕೊಳ್ಳುವಿಕೆ, ಮೋಸದಿಂದ ಹಸ್ತಕ್ಷೇಪ ಮಾಡುವಿಕೆ ಮತ್ತು ಮತದಾರರಿಗೆ ಭಯ ಮತ್ತು ಹೆದರಿಕೆ ಹುಟ್ಟಿಸುವ ಮತದಾರರು ಮತ ಚಲಾಯಿಸಲು ಬಿಡದೇ ಇರುವಂತಹ ಚುನಾವಣಾ ಅಕ್ರಮ ಮತ್ತು ಮತದಾನ ಪ್ರಕ್ರಿಯೆಯನ್ನು ಹಾಳು ಮಾಡುವ ವಿಷಯಗಳು ಅತ್ಯಂತ ಪ್ರಮುಖವಾದದ್ದು.

ಚುನಾವಣಾ ಅಕ್ರಮ ಚಟುವಟಿಕೆಗಳಲ್ಲಿ ಭಾಗವಹಿಸುವ ಸಮಾಜಘಾತುಕ ವ್ಯಕ್ತಿಗಳು ಅನುಸರಿಸುವ ಮಾರ್ಗಗಳು ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಭಿನ್ನವಾಗಿರುತ್ತದೆ. ಚುನಾವಣಾ ವೀಕ್ಷಕರು ಅಂತಹ ವ್ಯಕ್ತಿಗಳನ್ನು ಮತ್ತು ಅಂತಹ ಪ್ರದೇಶಗಳನ್ನು ಗುರುತಿಸುವುದು.

ಮತದಾನದ ದಿನದಂದು ಅಂತಹ ಪ್ರದೇಶಗಳಲ್ಲಿ ಚುನಾವಣಾ ಅಕ್ರಮ ನಡೆಯದಂತೆ ತಡೆಯಲು ಎಲ್ಲಾ ಸೂಕ್ತ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

**30. ಮಸ್ಟರಿಂಗ್ ಕೇಂದ್ರಗಳಿಗೆ ಭೇಟಿ:**

ಮತಗಟ್ಟೆ ಸಿಬ್ಬಂದಿಗಳು ಅವರಿಗೆ ನೇಮಿಸಲಾದ ಮತಗಟ್ಟೆಗಳಿಗೆ ತೆರಳುವ ಮುನ್ನ ಮಸ್ಟರಿಂಗ್ ಕೇಂದ್ರಗಳಿಗೆ ಚುನಾವಣಾ ವೀಕ್ಷಕರು ಭೇಟಿ ನೀಡಿ ಮಸ್ಟರಿಂಗ್ ಕಾರ್ಯವನ್ನು ಯಾವ ರೀತಿಯಲ್ಲಿ ನಡೆಸಲಾಗಿದೆ ಎಂಬುದರ ಬಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ಕಳುಹಿಸಬೇಕಾಗುತ್ತದೆ. ಅವರು ಮತಗಟ್ಟೆ ಸಿಬ್ಬಂದಿಗಳಿಗೆ ಮತಗಟ್ಟೆಗಳನ್ನು ಹಂಚಿಕೆ ಮಾಡಲು ರ್‍ಯಾಂಡಮೈಸೇಷನ್ ಕ್ರಮವನ್ನು ಅನುಸರಿಸಿ ಮಾಡಲಾಗಿದೆಯೇ ಎಂದು ಪರಿಶೀಲಿಸತಕ್ಕದ್ದು.

**31. ಮತದಾನ ದಿನದ ಚಟುವಟಿಕೆಗಳು:**

1. ಮತದಾನದ ದಿನದಂದು ಮತದಾನ ಪ್ರಕ್ರಿಯೆಯನ್ನು ಉಸ್ತುವಾರಿ ಮಾಡುವುದು ಒಂದು ಪ್ರಮುಖ ಕರ್ತವ್ಯ. ವೀಕ್ಷಕರು **ಅಂದು ಸಾಧ್ಯವಾದಷ್ಟು ಗರಿಷ್ಠ ಸಂಖ್ಯೆಯ ಮತಗಟ್ಟೆಗಳಿಗೆ ಮತದಾನದ ವೇಳೆಯಲ್ಲಿ ಭೇಟಿ ನೀಡಬೇಕು.** ಮತದಾನ ದಿನದಂದು ಕ್ಷೇತ್ರದಲ್ಲಿ ವೀಕ್ಷಕರ ಹಾಜರಾತಿ ಹಾಗೂ ಮತಗಟ್ಟೆಗಳಿಗೆ ಭೇಟಿ ನೀಡಿ ಚುನಾವಣಾ ಅಕ್ರಮ ಹಾಗೂ ಮತದಾನ ಕಲುಷಿತಗೊಳ್ಳುವುದನ್ನು ತಡೆಗಟ್ಟುವಂತಿರಬೇಕು. ವೀಕ್ಷಕರು ಸಂಬಂಧಿಸಿದ ಚುನಾವಣಾ ಅಧಿಕಾರಿ ಮತ್ತಿತರ ಆಡಳಿತ ಅಧಿಕಾರಿಗಳೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರಬೇಕು.
2. ಪ್ರಿಸೈಡಿಂಗ್ ಅಧಿಕಾರಿಗಳು ಮತದಾನ ದಿನದಂದು ಮತಗಟ್ಟೆಯಲ್ಲಿ ಹಾಜರಿರುವ ಪೋಲಿಂಗ್ ಏಜೆಂಟ್‌ರುಗಳಿಗೆ ಮತಪೆಟ್ಟಿಗೆ ಖಾಲಿ ಇರುವ ಬಗ್ಗೆ ಪರೀಕ್ಷಿಸಲು ಮತ್ತು ಮತಪೆಟ್ಟಿಗೆ ಖಾಲಿ ಇರುವುದನ್ನು ಪ್ರದರ್ಶಿಸಿರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
3. ಮತಗಟ್ಟೆಯ ಹೊರಗೆ ಯಾವುದಾದರೂ ಅಸಾಮಾನ್ಯ ಚಟುವಟಿಕೆ ನಡೆಯುತ್ತಿರುವ ಬಗ್ಗೆ ಅಥವಾ ಯಾವುದೇ ಚಟುವಟಿಕೆ ಇಲ್ಲದಿರುವುದು, ಮತದಾನ ಪ್ರಕ್ರಿಯೆಯನ್ನು ಹಾಳು ಮಾಡಲು, ಮುಕ್ತ, ನ್ಯಾಯಯುತ ಮತದಾನಕ್ಕೆ ಅಡ್ಡಿಪಡಿಸುವಂತಹ ಚುನಾವಣಾ ಅಕ್ರಮಗಳೇನಾದರೂ ನಡೆಯುತ್ತಿದೆಯೆ ಎಂಬುದನ್ನು ಗಮನಿಸುವುದು. ವೀಕ್ಷಕರು ಆ ವ್ಯಾಪ್ತಿಯ ಯಾವುದೇ ಮತಗಟ್ಟೆಗಳಲ್ಲಿ ಹಿಂದಿನ ಚುನಾವಣೆಗಳಲ್ಲಿ ಅಹಿತಕರ ಘಟನೆ, ಚುನಾವಣೆ ಅಕ್ರಮ ನಡೆದಿರುವ ಬಗ್ಗೆ ಮಾಹಿತಿ ಪಡೆಯುವುದು ಉತ್ತಮ. ಅವರು ಜಿಲ್ಲಾ ಚುನಾವಣಾಧಿಕಾರಿ / ಚುನಾವಣಾಧಿಕಾರಿ / ತಹಸೀಲ್ದಾರ್ ರವರೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಇದರಿಂದ ಅವರು ವೀಕ್ಷಿಸಿದ ಯಾವುದಾದರೂ ಕಾನೂನು ಬಾಹಿರ ಘಟನೆಗಳ ಬಗ್ಗೆ ಶೀಘ್ರವಾಗಿ ಕೈಗೊಳ್ಳಬೇಕಾದ ನಿವಾರಣಾ ಕ್ರಮಗಳನ್ನು ಕೈಗೊಳ್ಳಲು ಸೂಚಿಸಬಹುದಾಗಿರುತ್ತದೆ.
4. ಮತಗಟ್ಟೆಯೊಳಗೆ ಪ್ರವೇಶಿಸಿ ಮತದಾನದ ಪ್ರಗತಿಯನ್ನು ಪರಿಶೀಲಿಸುವುದು, ಹಾಗೂ ಮತಗಟ್ಟೆ ಅಧಿಕಾರಿಗಳು ಮತದಾನಕ್ಕೆ ನಿಗದಿಪಡಿಸಿರುವ ವಿಧಿ-ವಿಧಾನಗಳನ್ನು ಪಾಲಿಸುತ್ತಿದ್ದಾರೆಯೇ ಎಂಬುದನ್ನು ಹಾಗೂ ಪೋಲಿಂಗ್ ಏಜೆಂಟರ ಹಾಜರಾತಿಯನ್ನು, ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯಲ್ಲಿನ ಅಂಶಗಳನ್ನು ಕಾಲಕಾಲಕ್ಕೆ ಸರಿಯಾಗಿ

ಭರ್ತಿಮಾಡುತ್ತಿದ್ದಾರೆಯೇ ಎಂಬುದನ್ನು ಹಾಗೂ ಮತದಾನದ ಇನ್ನಿತರ ಪ್ರಕ್ರಿಯೆಗಳನ್ನು ಪರಿಶೀಲಿಸುವುದು.

5. ಮತದಾನದ ಮುಕ್ತಾಯದ ನಂತರ ಮತಪೆಟ್ಟಿಗೆಗಳನ್ನು ಹಾಗೂ ಮತದಾನ ಸಿಬ್ಬಂದಿಯನ್ನು ಮತದಾನ ಪರಿಕರಗಳೊಂದಿಗೆ ಸೂಕ್ತ ಭದ್ರತೆಯೊಂದಿಗೆ ಸಂಗ್ರಹಣಾ ಸ್ಥಳಕ್ಕೆ ಯಾವುದೇ ಅಡೆತಡೆ ಇಲ್ಲದೆ ಸಾಗಿಸಲು ಮಾಡಿರುವ ಏರ್ಪಾಟನ್ನು ಪರಾಮರ್ಶಿಸುವುದು. ಮತದಾನ ಸಿಬ್ಬಂದಿ ಮತಪೆಟ್ಟಿಗೆಯೊಂದಿಗೆ ಹೊರಟನಂತರ ತಮಗೆ ಸೂಚಿಸಿರುವ ಭದ್ರತಾ ಕೊಠಡಿ ಬಳಿ ಮಾತ್ರ ನಿಲ್ಲುವುದು.
6. ದಾಖಲಿಸಿದ ಮತಗಳ ಲೆಕ್ಕವನ್ನು ಪ್ರಪತ್ರ-28ರಲ್ಲಿ ಸರಿಯಾಗಿ ಮತ್ತು ಪೂರ್ಣವಾಗಿ ನಮೂದಿಸಿ ಪ್ರಿಸೈಡಿಂಗ್ ಅಧಿಕಾರಿಯ ದಿನಚರಿಯೊಂದಿಗೆ ನೀಡಿದ್ದಾರೆಂಬುದನ್ನು ಖಚಿತಪಡಿಸಿಕೊಳ್ಳುವುದು.

**32. ಸ್ವೀಕರಿಸುವ ಕೇಂದ್ರದಲ್ಲಿ (ಡಿಮಸ್ಟರಿಂಗ್) ವಿಶೇಷ ಕೌಂಟರ್ ಗಳನ್ನು ಸ್ಥಾಪಿಸುವ ಬಗ್ಗೆ:**

ಈ ಕೆಳಕಂಡ ಮತಗಟ್ಟೆಗಳ ಬಗ್ಗೆ ಹೆಚ್ಚಿನ ಗಮನಹರಿಸಬೇಕು

1. ಯಾವುದೇ ಮತದಾನವನ್ನು ತಾತ್ಕಾಲಿಕವಾಗಿ ಮುಂದೂಡಿದ ಮತಗಟ್ಟೆಗಳು
2. ತೀವ್ರತರವಾದ ದೂರುಗಳು ಬಂದಿರುವ ಮತಗಟ್ಟೆಗಳು

ಚುನಾವಣಾಧಿಕಾರಿಯವರು ಮೇಲೆ ವಿವರಿಸಿರುವ ಎಲ್ಲಾ ಮತಗಟ್ಟೆಗಳ ಪಟ್ಟಿಯನ್ನು ತಯಾರಿಸಿ ಚುನಾವಣಾಧಿಕಾರಿ / ತಹಸೀಲ್ದಾರರಿಗೆ ಹಾಗೂ ವೀಕ್ಷಕರಿಗೆ ಸಲ್ಲಿಸುವುದಲ್ಲದೆ ಅಂತಹ ಮತಗಟ್ಟೆಗಳ ಮತಪೆಟ್ಟಿಗೆ/ ವಿದ್ಯುನ್ಮಾನ ಮತಯಂತ್ರ ಮತ್ತು ಚುನಾವಣಾ ಕಾಗದ ಪತ್ರಗಳನ್ನು ವಿಶೇಷ ಕೌಂಟರ್‌ಗಳಲ್ಲಿ ಸ್ವೀಕರಿಸಬೇಕು. ಮಾಮೂಲಿ ಕೌಂಟರ್‌ಗಳಲ್ಲಿ ಸ್ವೀಕರಿಸುವಂತಿಲ್ಲ ಅಂತಹ ಮತಗಟ್ಟೆಗಳಿಗೆ ಸಂಬಂದಿಸಿದ ಪ್ರಿಸೈಡಿಂಗ್ ಅಧಿಕಾರಿ ದಿನಚರಿಯನ್ನು ಕೂಲಂಕುಷವಾಗಿ ಪರಿಶೀಲಿಸುವುದು.

**33. ದಾಖಲೆಗಳ ಪರಿಶೀಲನೆ:**

ಚುನಾವಣಾ ಅಕ್ರಮಗಳು ನಡೆದಿರುವ ಬಗ್ಗೆ ಪತ್ತೆ ಮಾಡಲು ಪ್ರಿಸೈಡಿಂಗ್ ಅಧಿಕಾರಿ ದಿನಚರಿ ತಾಲ್ಲೂಕು ಉಸ್ತುವಾರಿ ಅಧಿಕಾರಿ ವರದಿ, ಮತದಾನದ ಅಂಕಿ-ಅಂಶ ಇತ್ಯಾದಿಗಳನ್ನು ಮತದಾನ ನಡೆದ ನಂತರದ ದಿನದಂದು ಪರಿಶೀಲನೆ ಮಾಡುವುದು.

**34. ಮರು ಮತದಾನ ಮತ್ತು ಮತದಾನ ಮುಂದೂಡಿದ ಪ್ರಕರಣಗಳು:**

ಆಯೋಗವು ಮರುಮತದಾನಕ್ಕೆ ಆದೇಶಿಸಲು ವೀಕ್ಷಕರ ವರದಿ ಅತ್ಯಂತ ಪ್ರಮುಖವಾದ ಅಂಶವಾಗಿರುತ್ತದೆ. ಆದುದರಿಂದ ವೀಕ್ಷಕರು ತುಂಬಾ ಜಾಗರೂಕರಾಗಿ ದಕ್ಷತೆಯಿಂದ ಚುನಾವಣೆಯನ್ನು ಕಲುಷಿತಗೊಳಿಸುವ, ಕಲುಷಿತಗೊಳಿಸಿದ ಘಟನೆಗಳ ಬಗ್ಗೆ ವಸ್ತು ನಿಷ್ಟ ಮತ್ತು ನಿಖರವಾದ ವರದಿಯನ್ನು ಆಯೋಗಕ್ಕೆ ಕಳುಹಿಸಬೇಕು. ಕೆಲವು ಬಾರಿ ಬೇರೆ ಮೂಲಗಳಿಂದ ಸ್ವೀಕರಿಸಿದ ಮಾಹಿತಿಗಳನ್ನು

ವರದಿಗಾಗಿ ವೀಕ್ಷಕರಿಗೆ ಒಪ್ಪಿಸಿದಾಗ ಆ ಬಗ್ಗೆ ಪರಿಶೀಲಿಸಿ ತನಿಖೆ ನಡೆಸಿ ಅತ್ಯಂತ ಕ್ಷಿಪ್ರ ಅವಧಿಯಲ್ಲಿ ಆಯೋಗಕ್ಕೆ ವಸ್ತುನಿಷ್ಟ ನೈಜ ವರದಿಯನ್ನು ನೀಡಬೇಕು ಇದರಿಂದ ಮರುಮತದಾನ ಅವಶ್ಯಕ ಮತ್ತು ಸೂಕ್ತ ಎಂದು ಕಂಡು ಬಂದ ಮತಗಟ್ಟೆಗಳಲ್ಲಿ ಮರು ಮತದಾನಕ್ಕೆ ಆದೇಶಿಸಲು ಸಾಧ್ಯವಾಗುತ್ತದೆ.

ಮರುಮತದಾನದಲ್ಲಿ ಯಾವುದೇ ಅಕ್ರಮಗಳು ಮರುಕಳಿಸದಂತೆ ಹಾಗೂ ಚುನಾವಣೆ ಪ್ರಕ್ರಿಯೆಗಳು ಕಲುಷಿತಗೊಳ್ಳದಂತೆ ಎಚ್ಚರ ವಹಿಸುವುದು, ಮರುಮತದಾನ ನಡೆದ ಬಗ್ಗೆ ವೀಕ್ಷಕರು ಸಮಗ್ರವಾದ ನಿರ್ದಿಷ್ಟವಾದ ವರದಿಯನ್ನು ನೀಡಬೇಕು.

**35. ಮತದಾನ ಮುಕ್ತಾಯದ ವರದಿ:**

ಮತದಾನ ಮುಕ್ತಾಯವಾದ ನಂತರ ವೀಕ್ಷಕರು ವೀಕ್ಷಕರ ವರದಿ–4ರಲ್ಲಿ ಪೋಲಿಂಗ್ ಏಜೆಂಟರ ಪಾತ್ರ, ಸ್ವೀಕರಿಸಿದ ದೂರುಗಳ ಸಂಖ್ಯೆ ಮತ್ತು ಸ್ವರೂಪದ ಬಗ್ಗೆ ವರದಿ ಸಲ್ಲಿಸುವುದು. ಇದರ ಜೊತೆಗೆ ಸಮಗ್ರವಾಗಿ ಎಲ್ಲಾ ಪ್ರಮುಖ ಅಂಶಗಳನ್ನೊಳಗೊಂಡ ವರದಿಯನ್ನು ಕಳುಹಿಸುವುದು.

**36. ಮತಗಳ ಎಣಿಕೆ:**

ಮತ ಎಣಿಕೆ ಕಾರ್ಯವು ಸುಸೂತ್ರವಾಗಿ ನಡೆಯಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಪರಿಶೀಲನೆ ನಡೆಸತಕ್ಕದ್ದು. ಮತ ಎಣಿಕೆ ಕೇಂದ್ರಗಳಲ್ಲಿ ವೀಕ್ಷಕರಿಗೆ ಸೂಕ್ತ ಅನುಕೂಲ ಕಲ್ಪಿಸಬೇಕು ಹಾಗೂ ಮಾಧ್ಯಮದವರಿಗೆ ಪ್ರತ್ಯೇಕವಾಗಿ ವ್ಯವಸ್ಥೆಗಳನ್ನು ಕಲ್ಪಿಸುವುದು ಅವಶ್ಯ. ವೀಕ್ಷಕರು ಫಲಿತಾಂಶಗಳನ್ನು ಶೀಘ್ರವಾಗಿ ಪ್ರಕಟಿಸಲು ಹಾಗೂ ಜಿಲ್ಲಾ ಚುನಾವಣಾಧಿಕಾರಿ ಮತ್ತು ಆಯೋಗಕ್ಕೆ ವರದಿ ಮಾಡಲು ಸೂಕ್ತ ವ್ಯವಸ್ಥೆಗಳನ್ನು ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು. ವೀಕ್ಷಕರು ಮತ ಎಣಿಕೆ ಕಾರ್ಯದ ಉಸ್ತುವಾರಿಯಲ್ಲಿ ಮುಖ್ಯ ಪಾತ್ರವಹಿಸಬೇಕೆಂದು ಆಯೋಗವು ಆಶಿಸುತ್ತದೆ.

ಎಣಿಕೆ ಸಿಬ್ಬಂದಿಯನ್ನು ಎಣಿಕೆ ದಿನದಂದು ಮತ ಎಣಿಕೆ ಪ್ರಾರಂಭಕ್ಕೆ ಮುನ್ನ ಬೆಳಿಗ್ಗೆ ರ್‍ಯಾಂಡಮೈಸೇಶನ್ ಮಾಡಿರುವುದನ್ನು ಪರಿಶೀಲಿಸುವುದು. ಎಣಿಕೆ ಕಾರ್ಯವು ಪೂರ್ಣವಾಗಿ, ವ್ಯವಸ್ಥಿತವಾಗಿ ಹಾಗೂ ಅಚ್ಚುಕಟ್ಟಾಗಿರುವಂತೆ ಹಾಗೂ ಸ್ಪಷ್ಟವಾಗಿರುವಂತೆ ಖಾತ್ರಿಪಡಿಸಿಕೊಳ್ಳುವುದು.

ಅಭ್ಯರ್ಥಿಗಳಿಗೆ/ ಎಣಿಕೆ ಏಜೆಂಟರುಗಳಿಗೆ ಎಣಿಕೆ ಕಾರ್ಯದ ಸ್ಪಷ್ಟ ಚಿತ್ರಣ ಪಡೆಯಲು ಮುಕ್ತ ಅವಕಾಶವನ್ನು ನೀಡುವುದು. ಅವರಿಗೆ ಯಾವುದೇ ಅನುಮಾನಕ್ಕೆ ಅವಕಾಶ ನೀಡಬಾರದು. ಎಣಿಕೆ ಕೆಂದ್ರಗಳ ಸ್ಥಾಪನೆ ಹಾಗೂ ಏರ್ಪಾಡುಗಳ ಬಗ್ಗೆ ಆಯೋಗವು ಸೂಚನೆಗಳನ್ನು/ಮಾರ್ಗಸೂಚಿ ಗಳನ್ನು ನೀಡಿರುತ್ತದೆ. ಎಣಿಕೆ ಕೇಂದ್ರಗಳ ಆಯ್ಕೆಗೆ ನಿರ್ದಿಷ್ಟ ಅಳತೆಗೋಲು ಹಾಗೂ ಎಣಿಕೆ ಕಾರ್ಯದ ನಿರ್ವಹಣೆ ಬಗ್ಗೆ ಸೂಚನೆಗಳನ್ನು ನೀಡಿರುತ್ತದೆ. ಪ್ರತಿಯೊಂದು ಸುತ್ತಿನ ಎಣಿಕೆ ಫಲಿತಾಂಶದ ಪಟ್ಟಿಯನ್ನು ನಿಖರ ಹಾಗೂ ಕರಾರುವಾಕ್ಕಾಗಿ ತಯಾರಿಸಿರುವುದನ್ನು ಚುನಾವಣಾಧಿಕಾರಿ/ತಹಸೀಲ್ದಾರ್ ಹಾಗೂ ವೀಕ್ಷಕರು ಪರಿಶೀಲಿಸಿ, ಪ್ರತಿಯೊಬ್ಬ ಅಭ್ಯರ್ಥಿಯು ಎಣಿಕೆ ಟೇಬಲಿನಲ್ಲಿ ಪಡೆದ ಮತಗಳು, ಪ್ರಪತ್ರ 28ರ ಭಾಗ–II ರಲ್ಲಿ(ಮತಪತ್ರಗಳ ಲೆಕ್ಕ) ನಮೂದಿಸಿರುವ ಸಂಖ್ಯೆಗಳಿಗೆ ತಾಳೆಯಾಗುವುದನ್ನು ಖಾತ್ರಿ

ಪಡಿಸಿಕೊಳ್ಳುವುದು. ಎಣಿಕೆ ಮೇಲ್ವಿಚಾರಕರು ಪ್ರತಿಯೊಂದು ಎಣಿಕೆ ಟೇಬಲ್‌ನ ಒಟ್ಟು ಮತಗಳ ಲೆಕ್ಕದ(ಗ್ರಾಫ್ ಶೀಟ್) ಕೆಳಗೆ ಸಹಿಮಾಡಬೇಕು.

ಪ್ರತಿ ಕ್ಷೇತ್ರದ ಎಣಿಕೆ ಮುಗಿದ ನಂತರ ವ್ಯವಸ್ಥಿತ ರೀತಿಯಲ್ಲಿ ತಾಳೆನೋಡುವುದು. ನಂತರ ನಿಯಮಾನುಸಾರ ಆಯ್ಕೆಯಾದ ಅಭ್ಯರ್ಥಿಗಳ ಫಲಿತಾಂಶವನ್ನು R.O ಪ್ರಕಟಿಸುವರು. ಆಯ್ಕೆಯಾದ ಅಭ್ಯರ್ಥಿಯನ್ನು ಚುನಾವಣಾಧಿಕಾರಿಗಳು ಘೋಷಿಸಿದ ಕೂಡಲೇ ಸಂಬಂಧಿಸಿದ ಎಲ್ಲಾ ದಾಖಲೆ ಪತ್ರಗಳಿಗೆ ಚುನಾವಣಾಧಿಕಾರಿ ಸಹಿ ಮಾಡಿರುವುದನ್ನು ಖಚಿತ ಪಡಿಸಿಕೊಳ್ಳುವುದು.

**37. ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೈಟ್‌ಗೆ ಅಳವಡಿಸುವುದು:**

ಅಂತಿಮ ಫಲಿತಾಂಶವನ್ನು ಆಯೋಗದ ವೆಬ್‌ಸೈಟ್‌ಗೆ ಅಳವಡಿಸಲು ಕ್ರಮ ಕೈಗೊಳ್ಳುವುದರಿಂದ ಎಣಿಕೆ ದಿನದಂದು ಯಾವುದೇ ತಪ್ಪಾದ ಮಾಹಿತಿ ಕಳುಹಿಸದಂತೆ ಎಚ್ಚರಿಕೆ ವಹಿಸುವುದು ಅತ್ಯವಶ್ಯಕ. ಅಂತಿಮ ಫಲಿತಾಂಶ ಘೋಷಣೆಯಾದ ನಂತರ ಚುನಾವಣಾಧಿಕಾರಿಗಳು

1. ಅಂತಿಮ ಫಲಿತಾಂಶದ ಹಾಳೆ ಪ್ರಪತ್ರ –31
2. ಫಲಿತಾಂಶ ಘೋಷಣೆ ಪ್ರಪತ್ರ–34
3. ಚುನಾವಣೆಯ ವಿವರ ಪತ್ರಿಕೆ ಪ್ರಪತ್ರ–36

ಇವುಗಳನ್ನು ಕ್ರಮವಾಗಿ ಭರ್ತಿ ಮಾಡಿ ಆಯೋಗಕ್ಕೆ ಕಳುಹಿಸುವುದನ್ನು ಖಾತ್ರಿಪಡಿಸಿ ಕೊಳ್ಳುವುದು. ಮುಂದಿನ ಯಾವುದೇ ವ್ಯವಹರಣೆಗಳಿಗೆ ಹಾಗೂ ದಾಖಲೆಗಳಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ನಾಮಪತ್ರದಲ್ಲಿ ನಮೂದಿಸಿದ ಹೆಸರು ಮಾತ್ರ ಸಿಂಧುವಾಗುತ್ತದೆಂಬುದನ್ನು ಗಮನ ದಲ್ಲಿರಿಸಿಕೊಳ್ಳುವುದು. ಅಭ್ಯರ್ಥಿಗಳು ನಾಮಪತ್ರದಲ್ಲಿ ನಮೂದಿಸಿದಂತೆಯೆ ಹೆಸರುಗಳ ಅಕ್ಷರಗಳನ್ನು ಪ್ರಪತ್ರ–10 ರಲ್ಲಿ ನಮೂದಿಸಿರಬೇಕು. ಚುನಾವಣಾಧಿಕಾರಿ ಯಾವುದಾದರೂ ಅಭ್ಯರ್ಥಿಗಳ ಹೆಸರನ್ನು ಸ್ವಲ್ಪ ಬದಲಾವಣೆ ಮಾಡಿ ನಮೂದಿಸಲು ಅನುಮತಿಸಿದ್ದಲ್ಲಿ ಅದೇ ರೀತಿಯಲ್ಲಿ ಹೆಸರನ್ನು ಅಂತಿಮ ಫಲಿತಾಂಶದ ಹಾಳೆ ಪ್ರಪತ್ರ–31, ಫಲಿತಾಂಶ ಘೋಷಣೆ ಪ್ರಪತ್ರ–34, ಇವೆಲ್ಲವುಗಳಲ್ಲಿಯೂ ನಮೂದಿಸಿರಬೇಕು. ಈ ಅಂಶದ ಬಗ್ಗೆ ವೀಕ್ಷಕರು ಚುನಾವಣಾಧಿಕಾರಿಗಳಿಗೆ ತಿಳಿಸಬೇಕು. ಹಾಗೂ ಇದನ್ನು ಪಾಲಿಸಿರುವ ಬಗ್ಗೆ ಖಾತ್ರಿಪಡಿಸಿಕೊಳ್ಳಬೇಕು.

**38. ಚುನಾವಣಾ ವೀಕ್ಷಕರು ಮಾಡಬೇಕಾದ್ದು ಮತ್ತು ಮಾಡಬಾರದವುಗಳು (Dos and Don'ts):**

## 1. ಮಾಡಬೇಕಾದವುಗಳು (Dos)

**1.1.** ತಮ್ಮ ವೈಯಕ್ತಿಕ ವಿವರಗಳನ್ನು ಭರ್ತಿ ಮಾಡುವಾಗ ಸರಿಯಾದ ಮನೆ ವಿಳಾಸ ಮತ್ತು ದೂರವಾಣಿ/ಫ್ಯಾಕ್ಸ್ ಸಂಖ್ಯೆಗಳನ್ನು ನಮೂದಿಸಿ ಮತ್ತು ಯಾವುದಾದರೂ ಬದಲಾವಣೆ ಇದ್ದಲ್ಲಿ ಕಾಲಕಾಲಕ್ಕೆ ಬದಲಾವಣೆಗಳನ್ನು ತಿಳಿಸತಕ್ಕದ್ದು.

**1.2.** ತಮ್ಮ ಪ್ರವಾಸ ಕಾರ್ಯಕ್ರಮಗಳನ್ನು ಸಾಕಷ್ಟು ಮುಂಚಿತವಾಗಿ ತಯಾರಿಸಿಕೊಂಡು ಅದನ್ನು ಆಯೋಗಕ್ಕೆ, ಜಿಲ್ಲಾ ಚುನಾವಣಾಧಿಕಾರಿಗಳಿಗೆ, ತಾಲ್ಲೂಕು ಉಸ್ತುವಾರಿ ಅಧಿಕಾರಿ ತಹಸೀಲ್ದಾರರಿಗೆ ಮತ್ತು ಸಂಬಂಧಿಸಿದ ಗ್ರಾಮ ಪಂಚಾಯತಿ ಚುನಾವಣಾಧಿಕಾರಿಗಳಿಗೆ ತಿಳಿಸತಕ್ಕದ್ದು.

1.3. ಹಂಚಿಕೆ ಮಾಡಲಾದ ತಾಲ್ಲೂಕುಗಳಲ್ಲಿ ತಮ್ಮ ಪ್ರವಾಸ ಕಾರ್ಯಕ್ರಮವನ್ನು ಪ್ರಚುರಪಡಿಸಿರುವ ಬಗ್ಗೆ ಖಾತ್ರಿ ಪಡಿಸಿಕೊಳ್ಳತಕ್ಕದ್ದು.

1.4. ಹೆಚ್ಚಿನ ಗಮನಹರಿಸಬೇಕಾದ ಸ್ಥಳ ಮತ್ತು ಮತಗಟ್ಟೆಗಳನ್ನು ಮೊದಲೇ ಗುರುತಿಸತಕ್ಕದ್ದು.

1.5. ಸಾಕಷ್ಟು ಸಂಖ್ಯೆಯಲ್ಲಿ ಮತಗಟ್ಟೆ ಸಾಮಗ್ರಿಗಳು ದಾಸ್ತಾನು ಮಾಡಿಕೊಂಡು ಲಭ್ಯವಿರುವ ಬಗ್ಗೆ ಪರಿಶೀಲಿಸತಕ್ಕದ್ದು.

1.6. ಸ್ವಸಾಮರ್ಥ್ಯದಿಂದ ಕಾನೂನು ಮತ್ತು ಸುವ್ಯವಸ್ಥೆಯ ಪರಿಸ್ಥಿತಿಯನ್ನು ಸಾಮಾನ್ಯವಾಗಿ ನಿರ್ಧರಿಸತಕ್ಕದ್ದು.

1.7. ಮತಗಟ್ಟೆಗಳಿಗೆ ತಮ್ಮ ಇಚ್ಛಾನುಸಾರ ಭೇಟಿ ನೀಡಿ ಅವುಗಳನ್ನು ಪರಿಶೀಲಿಸತಕ್ಕದ್ದು.

1.8. ಮಾದರಿ ನೀತಿ ಸಂಹಿತೆ ಉಲ್ಲಂಘನೆ, ವರ್ಗಾವಣೆಯ ಮೇಲೆ ನಿಷೇಧ ಇತ್ಯಾದಿಗಳ ಬಗ್ಗೆ ನಿಗಾವಹಿಸತಕ್ಕದ್ದು.

1.9. ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸತಕ್ಕದ್ದು.

1.10. ಕೇಂದ್ರ ಪಡೆಗಳನ್ನು ನಿಯೋಜನೆ ಮಾಡಿದ್ದಲ್ಲಿ ಪರಿಣಾಮಕಾರಿಯಾಗಿರುವ ಬಗ್ಗೆ ನಿಗಾವಹಿಸತಕ್ಕದ್ದು.

1.11. ಕ್ಷೇತ್ರಗಳಿಗೆ ಭೇಟಿ ನೀಡಿ ಕೇಂದ್ರಸ್ಥಾನಕ್ಕೆ ವಾಪಸ್ಸು ಬಂದ ನಂತರ 24 ಗಂಟೆಗಳ ಒಳಗಾಗಿ ತಮ್ಮ ವರದಿಯನ್ನು ಆಯೋಗಕ್ಕೆ ಕಳುಹಿಸತಕ್ಕದ್ದು. ಅದರೊಂದಿಗೆ ಕಾಲಕಾಲಕ್ಕೆ ನಿರ್ಣಯಿಸಿ ಕಳುಹಿಸಬೇಕಾದ ವರದಿಗಳನ್ನು ಕಳುಹಿಸತಕ್ಕದ್ದು.

1.12. ಮುಖ್ಯವಾದ ಮತ್ತು ತಕ್ಷಣ ಪರಿಹರಿಸಬೇಕಾದ ವಿಷಯಗಳು ಮತ್ತು ಇತರೆ ವಿಷಯಗಳನ್ನು ಆಯೋಗದ ಗಮನಕ್ಕಾಗಲಿ ಅಥವಾ ಚುನಾವಣಾಧಿಕಾರಿಗಳ ಗಮನಕ್ಕಾಗಲೀ ತರಬೇಕಾದಲ್ಲಿ ಅದನ್ನು ವಿಳಂಬಕ್ಕೆ ಅವಕಾಶ ನೀಡದೇ, ಅಂತಹ ವಿಷಯಗಳನ್ನು ಸಾಮಾನ್ಯವಾಗಿ ಕಳುಹಿಸುವ ವರದಿಯೊಂದಿಗೆ ಕಳುಹಿಸದೆ ತುರ್ತಾಗಿ ಕಳುಹಿಸತಕ್ಕದ್ದು.

1.13. ವರದಿಗಳನ್ನು ರಹಸ್ಯವಾಗಿ ಮುಚ್ಚಿದ ಕವರ್‌ಗಳಲ್ಲಿ ಆಯೋಗಕ್ಕೆ ಕಳುಹಿಸತಕ್ಕದ್ದು.

1.14. ಕೇಂದ್ರಸ್ಥಾನವನ್ನು ಬಿಡುವ ಮುನ್ನ ಆಯೋಗದ ಅನುಮತಿಯನ್ನು ಪಡೆಯತಕ್ಕದ್ದು.

1.15. ಚುನಾವಣಾ ವೀಕ್ಷಕರು ತಮಗೆ ವಹಿಸಲಾದ ಕರ್ತವ್ಯಗಳನ್ನು ಸೂಕ್ಷ್ಮವಾಗಿ ಮತ್ತು ಅತ್ಯಂತ ಪರಿಣಾಮಕಾರಿಯಾಗಿ ಆಯೋಗವು ನಿರ್ದೇಶಿಸಿದಂತೆ ನಿಗಾವಹಿಸಿ ನಿರ್ವಹಿಸತಕ್ಕದ್ದು.

## 2. ಮಾಡಬಾರದವುಗಳು (Don’ts)

2.1. ವೀಕ್ಷಕರು ಆಯೋಗವು ಆಯೋಜಿಸುವ, ಚುನಾವಣೆ ಮಾಹಿತಿ ನೀಡುವ ಸಂಕ್ಷಿಪ್ತ ಸಭೆಗಳಲ್ಲಿ ಭಾಗವಹಿಸುವುದರಿಂದ ರಿಯಾಯಿತಿಯನ್ನು ಕೋರಬಾರದು.

2.2. ತಮ್ಮ ಕುಟುಂಬದೊಂದಿಗೆ ತಮಗೆ ಹಂಚಿಕೆ ಮಾಡಲಾದ ಉಪವಿಭಾಗದ ವ್ಯಾಪ್ತಿಗಳಲ್ಲಿ ಸಂಚರಿಸಬಾರದು

2.3. ಮಾಧ್ಯಮದವರೊಂದಿಗೆ ಮಾತನಾಡಬಾರದು.

2.4. ತಾವು ಸ್ವಂತವಾಗಿ ಸಭೆಗಳನ್ನು ಕರೆಯಬಾರದು.

2.5. ಜಿಲ್ಲಾ ಚುನಾವಣಾಧಿಕಾರಿ / ತಹಸೀಲ್ದಾರ್ / ಚುನಾವಣಾಧಿಕಾರಿಗಳ ಮುಂದೆ ವಾಸ್ತವ್ಯ, ವಾಹನ, ರಕ್ಷಣೆ ವ್ಯವಸ್ಥೆ ಇತ್ಯಾದಿಗಳ ಬಗ್ಗೆ ಅನಗತ್ಯವಾಗಿ ಬೇಡಿಕೆಗಳನ್ನು ಮಾಡಬಾರದು.

2.6. ಯಾವುದೇ ಕಾರಣಕ್ಕೂ ಆಯೋಗದ ಪೂರ್ವಾನುಮತಿ ಪಡೆಯದೆ ತಮಗೆ ಹಂಚಿಕೆ ಮಾಡಲಾದ ಸ್ಥಳವನ್ನು ಹಾಗೂ ತಮ್ಮ ಕೇಂದ್ರ ಸ್ಥಾನವನ್ನು ಬಿಡಬಾರದು.

2.7. ಮತದಾನ ಮುಗಿದ ನಂತರದ ದಿನ ಅಥವಾ ಮತ ಎಣಿಕೆ ದಿನದಂದು ತಮಗೆ ಹಂಚಿಕೆ ಮಾಡಲಾದ ಉಪವಿಭಾಗದಲ್ಲಿ ಕರ್ತವ್ಯದಿಂದ ನಿರ್ಗಮಿಸಲು ಯೋಜನೆಯನ್ನು ಮಾಡಬಾರದು.

2.8. ಅತ್ಯಂತ ತುರ್ತಾಗಿ ನಿರ್ಧಾರ/ ಕ್ರಮ ತೆಗೆದುಕೊಳ್ಳಬೇಕಾದ ವಿಷಯಗಳನ್ನು ಸಮಗ್ರವಾಗಿ ಕಳುಹಿಸುವ ವರದಿಯವರೆಗೆ ಮುಂದೂಡದೆ ಅಂತಹ ವರದಿಗಳನ್ನು ವೇಗವಾದ ಮಾರ್ಗಗಳ ಮೂಲಕ ತುರ್ತಾಗಿ ಆಗಿಂದಾಗಲೇ ಆಯೋಗದ ಗಮನಕ್ಕೆ ತರತಕ್ಕದ್ದು.

# ಅನುಬಂಧ-1

## ಚೆಕ್ ಲಿಸ್ಟ್
## (ತಾಲ್ಲೂಕುವಾರು ವಿವರ)

ಚುನಾವಣಾ ವೀಕ್ಷಕರ ಆಗಮನ ಕಾಲದಲ್ಲಿ ತಹಸೀಲ್ದಾರ್ ರವರು ತಯಾರಿಸಿ ಒದಗಿಸಬೇಕಾದ ಮಾಹಿತಿ/ ವಿವರಗಳು.

1. ಜಿಲ್ಲಾಧಿಕಾರಿಯವರ ಹೆಸರು ಮತ್ತು ಮೊಬೈಲ್ ಹಾಗೂ ಕಚೇರಿ ದೂರವಾಣಿ ಸಂಖ್ಯೆ
2. ಉಪ ವಿಭಾಗಾಧಿಕಾರಿಯವರ ಹೆಸರು ಮತ್ತು ಮೊಬೈಲ್ ಹಾಗೂ ಕಚೇರಿ ದೂರವಾಣಿ ಸಂಖ್ಯೆ
3. ತಹಸೀಲ್ದಾರ್ ರವರ ಹೆಸರು ಮತ್ತು ಮೊಬೈಲ್ ಹಾಗೂ ಕಚೇರಿ ದೂರವಾಣಿ ಸಂಖ್ಯೆ
4. ಡಿವೈಎಸ್‌ಪಿ ರವರ ಹೆಸರು ಮತ್ತು ಮೊಬೈಲ್ ಹಾಗೂ ಕಚೇರಿ ದೂರವಾಣಿ ಸಂಖ್ಯೆ
5. ಸರ್ಕಲ್ ಇನ್ಸ್‌ಪೆಕ್ಟರ್ ರವರ ಹೆಸರು ಮತ್ತು ಮೊಬೈಲ್ ಹಾಗೂ ಕಚೇರಿ ದೂರವಾಣಿ ಸಂಖ್ಯೆ
6. ಚುನಾವಣೆ ನಡೆಯುತ್ತಿರುವ ಗ್ರಾಮ ಪಂಚಾಯಿತಿಗಳ ವಿವರಗಳು
7. ಚುನಾವಣಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿಗಳ ವಿವರ
8. ಮತಗಟ್ಟೆಗಳ ವಿವರ;

   8.1. ಸೂಕ್ಷ್ಮ ಮತಗಟ್ಟೆಗಳು
   8.2. ಅತಿಸೂಕ್ಷ್ಮ ಮತಗಟ್ಟೆಗಳು ಅಥವಾ ವಲ್ನರಬಲ್ ಪ್ರದೇಶದ ವಿವರ
9. ಸೇವಾ ಮತದಾರರನ್ನೊಳಗೊಂಡಂತೆ ಮತದಾರರ ವಿವರ
10. ಮತದಾರರ ಪಟ್ಟಿಗೆ ಪೂರಕ ಮತದಾರರ ಪಟ್ಟಿ ಸೇರ್ಪಡೆ ಮಾಡಿರುವ ಬಗ್ಗೆ ಮಾಹಿತಿ
11. ಮತ ಪೆಟ್ಟಿಗೆಗಳ ವಿವರ

| ತಾಲ್ಲೂಕಿನ ಹೆಸರು | ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ | ಮತಗಟ್ಟೆಗಳಿಗೆ ಅಗತ್ಯವಿರುವ ಒಟ್ಟು ಮತ ಪೆಟ್ಟಿಗೆಗಳ ಸಂಖ್ಯೆ | ಮೀಸಲು ಮತ ಪೆಟ್ಟಿಗೆಗಳ ಒಟ್ಟು ಸಂಖ್ಯೆ | ಅಗತ್ಯ ವಿರುವ ಒಟ್ಟು ಸಂಖ್ಯೆ | ಲಭ್ಯ ವಿರುವ ಸಂಖ್ಯೆ | ಮತ ಪೆಟ್ಟಿಗೆಗಳು ಸುಸ್ಥಿತಿಯಲ್ಲಿರುವ ಬಗ್ಗೆ ಪರಿಶೀಲಿಸಲಾಗಿದೆಯೇ ಹೌದು / ಇಲ್ಲ |
|---|---|---|---|---|---|---|
| | | | | | | |

12. ಮಸ್ಟರಿಂಗ್, ಡಿ–ಮಸ್ಟರಿಂಗ್, ಭದ್ರತಾ ಕೊಠಡಿ ಮತ್ತು ಮತ ಎಣಿಕೆ ಕೇಂದ್ರಗಳ ಮಾಹಿತಿ

13. ಮತಗಟ್ಟೆ ಸಿಬ್ಬಂದಿಗಳ ವಿವರ

13.1. ಸಂಖ್ಯೆ

13.2. ರ‍್ಯಾಂಡಮೈಸೇಷನ್‌ಗೆ ನಿಗದಿಪಡಿಸಿದ ದಿನಾಂಕ

13.3. ತರಬೇತಿ

14. ಅಂಚೆ ಮತಪತ್ರ ಸ್ವೀಕೃತಿ ಮತ್ತು ಎಣಿಕೆ ಮಾಡುವ ವ್ಯವಸ್ಥೆ

15. ಮಸ್ಟರಿಂಗ್, ಡಿಮಸ್ಟರಿಂಗ್, ಮತದಾನದ ದಿನ, ಭದ್ರತಾ ಕೊಠಡಿ ಮತ್ತು ಎಣಿಕೆ ಕೇಂದ್ರಗಳಲ್ಲಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ

16. ಮುಂಜಾಗ್ರತಾ ಕ್ರಮ ತೆಗೆದುಕೊಂಡಿರುವ ಬಗ್ಗೆ.

16.1. ಗ್ರಾಮ ಪಂಚಾಯತಿಗಳ ಸಂಖ್ಯೆ (ತಾಲ್ಲೂಕುವಾರು)

16.2. ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ನಿಟ್ಟಿನಲ್ಲಿ ತಹಸೀಲ್ದಾರ್ ಮತ್ತು ಡಿವೈಎಸ್‌ಪಿ ರವರೊಂದಿಗೆ ಜಂಟಿ ಕ್ರಿಯಾ ಯೋಜನೆ

16.3. ಕೈಗೊಳ್ಳಬಹುದಾದ ರಕ್ಷಣಾತ್ಮಕ ಕಾರ್ಯಗಳು

16.4. ಕ್ರಿಮಿನಲ್ ಅಪರಾಧ ಹಿನ್ನೆಲೆಯುಳ್ಳ ವ್ಯಕ್ತಿಗಳ ಸಂಖ್ಯೆ ಮತ್ತು ದಾಖಲೆ ಪುಸ್ತಕ

16.5. ಬಂಧಿಸಲ್ಪಟ್ಟಿರುವ ವ್ಯಕ್ತಿಗಳ ಸಂಖ್ಯೆ

16.6. ಬಂಧಿಸಲ್ಪಟ್ಟಿರುವ ಹಾಗೂ ಮುಂದೆ ಉತ್ತಮ ನಡತೆ ಹೊಂದುತ್ತೇವೆಂದು ಕರಾರು ಪತ್ರ ಬರೆದು ಕೊಟ್ಟು ಬಿಡುಗಡೆಯಾದ ವ್ಯಕ್ತಿಗಳ ಸಂಖ್ಯೆ

16.7. ಜಾಮೀನುರಹಿತ ವಾರಂಟ್ ನೀಡಿರುವ / ಜಾರಿ ಯಾಗಿರುವ/ ಪ್ರಕರಣಗಳು/ ಬಾಕಿ ಉಳಿದವುಗಳು/  ಬಾಕಿ ಉಳಿಯುವುದಕ್ಕೆ ಕಾರಣಗಳು

16.8. ಪರವಾನಗಿ ನೀಡಿರುವ ಶಸ್ತ್ರಾಸ್ತ್ರಗಳ ಸಂಖ್ಯೆ

16.9. ಪ್ರತಿಬಂಧಕ ಸ್ಥಾನಬದ್ಧತೆ

16.10. ಪರವಾನಗಿ ನೀಡಿರುವ ಶಸ್ತ್ರಾಸ್ತ್ರಗಳನ್ನು ಒಪ್ಪಿಸಿರುವ ಸಂಖ್ಯೆ

16.11. ವಶಪಡಿಸಿಕೊಂಡ ಅನಧಿಕೃತ ಶಸ್ತ್ರಾಸ್ತ್ರಗಳ ಸಂಖ್ಯೆ

16.12. ಗುರುತಿಸಲ್ಪಟ್ಟ ಸಮಾಜ ವಿರೋಧಿ ವ್ಯಕ್ತಿಗಳ ಸಂಖ್ಯೆ

16.13. ವಲ್ನರಬಲ್ ಪ್ರದೇಶಗಳೆಂದು ಗುರುತಿಸಿರುವ ಮತ್ತು ಅದಕ್ಕಾಗಿ ತೆಗೆದುಕೊಂಡಿರುವ ವಿಶೇಷ ಕ್ರಮಗಳು

16.14. ಅಕ್ರಮ ಮದ್ಯ ಸಾಗಾಣಿಕೆಯನ್ನು ತಡೆಗಟ್ಟಲು ತೆಗೆದುಕೊಂಡಿರುವ ಕ್ರಮಗಳು

16.15. ಈ ಉದ್ದೇಶಕ್ಕಾಗಿ ನೇಮಿಸಲಾದ ಪ್ರಹಾರ ದಳದ ಸಂಖ್ಯೆ

16.16. ಮತಗಟ್ಟೆ ಅಕ್ರಮಗಳನ್ನು ತಡೆಗಟ್ಟುವುದಕ್ಕಾಗಿ ಪ್ರತ್ಯೇಕ ಪ್ರಹಾರ ದಳವನ್ನು ನೇಮಕ ಮಾಡುವ ಕಾರ್ಯಕ್ರಮ.

16.17. ಕಾನೂನು ಮತ್ತು ಸುವ್ಯವಸ್ಥೆ ಬಗ್ಗೆ ಆಯೋಗಕ್ಕೆ/ ಪೊಲೀಸ್ ಕಮೀಷನರ್‌ಗೆ ಕಳುಹಿಸುವ ವರದಿಯನ್ನು ಚುನಾವಣಾ ವೀಕ್ಷಕರಿಗೂ ಕಳುಹಿಸುವುದು.

17. ಮಾದರಿ ನೀತಿ ಸಂಹಿತೆಯನ್ನು ಅನುಷ್ಠಾನಗೊಳಿಸಲು ಮಾಡಿರುವ ಸಿದ್ಧತೆಗಳು

18. ಚುನಾವಣಾ ಸಾಮಗ್ರಿಗಳು, ನಮೂನೆಗಳು, ಪ್ರಪತ್ರಗಳು ಇತ್ಯಾದಿಗಳ ಬಗ್ಗೆ ಮಾಡಿಕೊಂಡಿರುವ ಸಿದ್ಧತೆ

# ಅನುಬಂಧ–2

## ವೀಕ್ಷಕರ ವರದಿ–1

## (ತಾಲ್ಲೂಕುವಾರು ವಿವರ)

(ಮೊದಲನೇ ವರದಿಯನ್ನು ವೀಕ್ಷಕರು, ನಾಮಪತ್ರ ಪರಿಶೀಲನೆ ಮುಗಿದ ಕೂಡಲೇ ಆಯೋಗಕ್ಕೆ ಕಳುಹಿಸತಕ್ಕದ್ದು)

| | | |
|---|---|---|
| 1 | ಹೆಸರು ಮತ್ತು ಪದನಾಮ | |
| 2 | ನಿಗದಿಪಡಿಸಿದ ಉಪ ವಿಭಾಗ | |
| 3 | ವರದಿಸಲಾಗುತ್ತಿರುವ ತಾಲ್ಲೂಕಿನ ಹೆಸರು | |

| | | | |
|---|---|---|---|
| 1 | ಮತಗಟ್ಟೆಗಳು: | | |
| | ಎ) ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳನ್ನು ಭೇಟಿ ಮಾಡಲಾಗಿದೆಯೇ? | ಹೌದು | ಇಲ್ಲ |
| | ಬಿ) ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಮತಗಟ್ಟೆಗಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಗಿದೆಯೇ? | ಹೌದು | ಇಲ್ಲ |
| | ಸಿ) ವಲ್ನರಬಲ್ ಪ್ರದೇಶಗಳಿಗೆ ಭೇಟಿ ನೀಡಲಾಗಿದೆಯೇ? | ಹೌದು | ಇಲ್ಲ |
| | ಡಿ) ವಲ್ನರಬಲ್ ಪ್ರದೇಶದ ಮತದಾರರಿಗೆ ನಿರ್ಭೀತಿಯಿಂದ ಮತ ಚಲಾಯಿಸಲು ವ್ಯವಸ್ಥೆ ಕಲ್ಪಿಸಲಾಗಿದೆಯೇ? | ಹೌದು | ಇಲ್ಲ |
| 2 | ಮತದಾರರ ಪಟ್ಟಿ: | | |
| | ಎ) ಮತದಾರರ ಪಟ್ಟಿ ತಯಾರಿಸಲಾಗಿದೆಯೇ? | ಹೌದು | ಇಲ್ಲ |
| | ಬಿ) ಮತದಾರರ ಪೂರಕ ಪಟ್ಟಿ ಸಿದ್ಧ ಪಡಿಸಲಾಗಿದೆಯೇ? | ಹೌದು | ಇಲ್ಲ |
| | ಸಿ) ಸೇವಾ ಮತದಾರರ ಪಟ್ಟಿ ಸಿದ್ಧ ಪಡಿಸಲಾಗಿದೆಯೇ? | ಹೌದು | ಇಲ್ಲ |

| | | |
|---|---|---|
| 3 | ನಾಮಪತ್ರ ಸ್ವೀಕೃತಿಯು ನಿಯಮಾನುಸಾರ ನಡೆದಿರುವ ಬಗ್ಗೆ ವರದಿ | |
| 4 | ನಾಮಪತ್ರ ಪರಿಶೀಲನೆಯು ನಿಯಮಾನುಸಾರ ನಡೆದಿರುವ ಬಗ್ಗೆ ವರದಿ | |
| 5 | ಮದ್ಯಪಾನ ನಿಷೇದ, ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚಿರುವ ಬಗ್ಗೆ ಆದೇಶ ಹೊರಡಿಸಲಾಗಿದೆಯೇ? | |
| 6 | ಚುನಾವಣಾ ವೀಕ್ಷಕರು ಗಮನಿಸಿರುವ ಯಾವುದಾದರೂ ವರದಿ ಮಾಡಬಹುದಾದ ವಿಶೇಷ ಪ್ರಸಂಗಗಳು | |

ದಿನಾಂಕ: ಚುನಾವಣಾ ವೀಕ್ಷಕರ ಸಹಿ ಮತ್ತು ಪದನಾಮ

ಸ್ಥಳ:

## ಅನುಬಂಧ–3

## ವೀಕ್ಷಕರ ವರದಿ–2
## (ತಾಲ್ಲೂಕುವಾರು ವಿವರ)

(ಎರಡನೇ ವರದಿಯನ್ನು ವೀಕ್ಷಕರು, ಉಮೇದುವಾರಿಕೆಯನ್ನು ಹಿಂಪಡೆದ ಕೂಡಲೇ ಆಯೋಗಕ್ಕೆ ಕಳುಹಿಸತಕ್ಕದ್ದು)

| | | |
|---|---|---|
| 1 | ಹೆಸರು ಮತ್ತು ಪದನಾಮ | |
| 2 | ನಿಗದಿಪಡಿಸಿದ ಉಪ ವಿಭಾಗ | |
| 3 | ವರದಿಸಲಾಗುತ್ತಿರುವ ತಾಲ್ಲೂಕಿನ ಹೆಸರು | |

| | | | |
|---|---|---|---|
| 1 | ಉಮೇದುವಾರಿಕೆ ಹಿಂಪಡೆದ ನಂತರ ಅವಿರೋಧ ಆಯ್ಕೆಯಾದ ಸದಸ್ಯರ ಸಂಖ್ಯೆ | | |
| 2 | ನಾಮಪತ್ರ ಬಾರದೇ ಇರುವ ಸ್ಥಾನಗಳ ಸಂಖ್ಯೆ | | |
| 3 | ಅಂತಿಮ ಕಣದಲ್ಲಿರುವ ಅಭ್ಯರ್ಥಿಗಳ ಸಂಖ್ಯೆ | | |
| 4 | ಸಿದ್ಧತೆಗಳು: | ಮಾಡಲಾಗಿದೆ | ಮಾಡಿರುವುದಿಲ್ಲ |
| | ಎ) ಮತಪತ್ರಗಳ ಮುದ್ರಣ | | |
| | ಬಿ) ಮತಗಟ್ಟೆ ಸಿಬ್ಬಂದಿಗೆ ಅಂಚೆ ಮತಪತ್ರಗಳನ್ನು ನೀಡಲು ಸಹಾಯ ಕೇಂದ್ರಗಳನ್ನು ಸ್ಥಾಪಿಸಿರುವ ಬಗ್ಗೆ | | |
| | ಸಿ) ಪೊಲೀಸ್ /ರಕ್ಷಣಾ ಇಲಾಖೆ/ ವಾಹನ ಚಾಲಕರು/ ಡಿ.ದರ್ಜೆ ನೌಕರರಿಗೆ ಅಂಚೆ ಮತ ಪತ್ರ ನೀಡುವ ಬಗ್ಗೆ | | |
| | ಡಿ) ಸೇವಾ ಮತದಾರರಿಗೆ ಅಂಚೆ ಮತಪತ್ರಗಳನ್ನು ಕಳುಹಿಸುವ ಬಗ್ಗೆ. | | |

| | | | |
|---|---|---|---|
| 5 | ಮತಗಟ್ಟೆ ಸಿಬ್ಬಂದಿಗಳ ಪಟ್ಟಿ ತಯಾರಿಕೆ | | |
| | ರ್‍ಯಾಂಡಮೈಸೇಷನ್ ನಡೆಸುವ ದಿನಾಂಕಗಳು | | |
| 6 | ತರಬೇತಿ | | |
| 7 | ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ | | |
| 8 | ಮಸ್ಟರಿಂಗ್, ಡಿ–ಮಸ್ಟರಿಂಗ್ ಮತ್ತು ಭದ್ರತಾ ಕೊಠಡಿಗಳ ಸಿದ್ಧತೆ | ಮಾಡಲಾಗಿದೆ | ಮಾಡಿರುವುದಿಲ್ಲ |
| 9 | ಮಾದರಿ ನೀತಿ ಸಂಹಿತೆ ಅನುಷ್ಠಾನಗೊಳಿಸಲು ಮಾಡಿರುವ ಸಿದ್ಧತೆಗಳು:<br>ಎ) ನಿಯಂತ್ರಣ ಕೊಠಡಿ ಸ್ಥಾಪಿಸಿರುವ ಬಗ್ಗೆ<br>ಬಿ) ಕಾರ್ಯ ತಂಡ ರಚನೆ<br>ಸಿ) ದೂರುಗಳನ್ನು ಸ್ವೀಕರಿಸಲು ಮತ್ತು ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವುದು. | | |
| 10 | ಮದ್ಯಪಾನ ನಿಷೇದ, ಮದ್ಯದ ಅಂಗಡಿಗಳನ್ನು ಮತ್ತು ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚಿರುವ ಬಗ್ಗೆ ಆದೇಶವನ್ನು ಕಟ್ಟುನಿಟ್ಟಾಗಿ ಪಾಲಿಸಲಾಗುತ್ತಿದೆಯೇ? | ಹೌದು | ಇಲ್ಲ |
| 11 | ಚುನಾವಣಾ ವೀಕ್ಷಕರು ಗಮನಿಸಿರುವ ಯಾವುದಾದರೂ ವರದಿ ಮಾಡಬಹುದಾದ ವಿಶೇಷ ಪ್ರಸಂಗಗಳು | | |

ದಿನಾಂಕ: ಚುನಾವಣಾ ವೀಕ್ಷಕರ ಸಹಿ ಮತ್ತು ಪದನಾಮ

ಸ್ಥಳ:

# ಅನುಬಂಧ–4

## ವೀಕ್ಷಕರ ವರದಿ–3

## (ತಾಲ್ಲೂಕುವಾರು ವಿವರ)

(ಮೂರನೇ ವರದಿಯನ್ನು ವೀಕ್ಷಕರು, ಮಸ್ಟರಿಂಗ್ ಕಾರ್ಯ ಮುಗಿದ ಕೂಡಲೇ ಆಯೋಗಕ್ಕೆ ಕಳುಹಿಸತಕ್ಕದ್ದು)

| | | |
|---|---|---|
| 1 | ಹೆಸರು ಮತ್ತು ಪದನಾಮ | |
| 2 | ನಿಗದಿಪಡಿಸಿದ ಉಪ ವಿಭಾಗ | |
| 3 | ವರದಿಸಲಾಗುತ್ತಿರುವ ತಾಲ್ಲೂಕಿನ ಹೆಸರು | |

| | | | |
|---|---|---|---|
| 1 | ಅವಶ್ಯವಿರುವ ಮತಗಟ್ಟೆ ಸಿಬ್ಬಂದಿಗಳನ್ನು ಗುರುತಿಸಿ, ನಿಯೋಜಿಸಲು ಕ್ರಮ ಕೈಗೊಳ್ಳಲಾಗಿದೆಯೇ? | | |
| 2 | ಮತಗಟ್ಟೆ ಸಿಬ್ಬಂದಿಗಳಿಗೆ ತರಬೇತಿ ನೀಡಲಾಗಿದೆಯೇ? | | |
| 3 | ಆಯೋಗವು ನೀಡಿರುವ ನಿರ್ದೇಶನದಂತೆ ಮತಗಟ್ಟೆ ಸಿಬ್ಬಂದಿಗಳ ರಾಂಡಮೈಸೇಷನ್ ಕ್ರಮ ಆಗಿದೆಯೇ? | | |
| 4 | ಮತಪೆಟ್ಟಿಗೆಗಳನ್ನು ಶುಚಿಗೊಳಿಸಿ ಮತದಾನಕ್ಕೆ ಸಿದ್ಧಪಡಿಸಲಾಗಿದೆಯೇ? | | |
| 5 | ಮತಗಟ್ಟೆ ಸಿಬ್ಬಂದಿಗಳನ್ನು ಮತದಾನ ಕೇಂದ್ರಕ್ಕೆ ತಲುಪಿಸಲು ಸೂಕ್ತ ವಾಹನದ ವ್ಯವಸ್ಥೆ ಮಾಡಲಾಗಿದೆಯೇ? | | |
| 6 | ಮಸ್ಟರಿಂಗ್ ಕಾರ್ಯದ ಸಂಕ್ಷಿಪ್ತ ವರದಿ | | |
| 7 | ಚುನಾವಣಾ ವೀಕ್ಷಕರು ಗಮನಿಸಿರುವ ಯಾವುದಾದರೂ ವರದಿ ಮಾಡಬಹುದಾದ ವಿಶೇಷ ಪ್ರಸಂಗಗಳು | | |

ದಿನಾಂಕ: ಚುನಾವಣಾ ವೀಕ್ಷಕರ ಸಹಿ ಮತ್ತು ಪದನಾಮ

ಸ್ಥಳ:

# ಅನುಬಂಧ–5

## ವೀಕ್ಷಕರ ವರದಿ–4

## (ತಾಲ್ಲೂಕುವಾರು ವಿವರ)

(ನಾಲ್ಕನೇ ವರದಿಯನ್ನು ವೀಕ್ಷಕರು ಮತದಾನ ಪ್ರಕ್ರಿಯೆ ಮುಗಿದ ತಕ್ಷಣ ಆಯೋಗಕ್ಕೆ ಕಳುಹಿಸತಕ್ಕದ್ದು)

| | | |
|---|---|---|
| 1 | ಹೆಸರು ಮತ್ತು ಪದನಾಮ | |
| 2 | ನಿಗದಿಪಡಿಸಿದ ಉಪ ವಿಭಾಗ | |
| 3 | ವರದಿಸಲಾಗುತ್ತಿರುವ ತಾಲ್ಲೂಕಿನ ಹೆಸರು | |

| | | |
|---|---|---|
| 1 | ಒಟ್ಟು ಮತಗಟ್ಟೆಗಳ ಸಂಖ್ಯೆ | |
| 2 | ಎ) ಮತದಾನ ಪ್ರಾರಂಭಕ್ಕೆ ಮೊದಲು ಮತಪೆಟ್ಟಿಗೆ ಖಾಲಿ ಇರುವ ಬಗ್ಗೆ ಅಭ್ಯರ್ಥಿಗಳ ಮತಗಟ್ಟೆ ಏಜೆಂಟರಿಗೆ ಪರೀಕ್ಷಿಸಲು ಅವಕಾಶ ನೀಡದಿರುವ ಮತ್ತು ಖಾಲಿ ಮತಪೆಟ್ಟಿಗೆಯನ್ನು ಪ್ರದರ್ಶಿಸದೇ ಇರುವ ಒಟ್ಟು ಮತಗಟ್ಟೆಗಳ ಸಂಖ್ಯೆ (ತಾಲ್ಲೂಕುವಾರು ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು)<br>ಬಿ) ಇವಿಎಂ ಬಳಕೆ ಇದ್ದಲ್ಲಿ ಅಣಕು ಮತದಾನವು ನಿಗದಿತ ಸಮಯಕ್ಕೆ ಮಾಡದಿರುವ ಮತಗಟ್ಟೆ ಸಂಖ್ಯೆ | |
| 3 | ಮತದಾನವು 2 ಗಂಟೆಗಿಂತ ಹೆಚ್ಚು ಕಾಲ ಸ್ಥಗಿತಗೊಂಡ ಮತ್ತು ತಡವಾಗಿ ಪ್ರಾರಂಭವಾದ ಮತಗಟ್ಟೆಗಳ ಸಂಖ್ಯೆ (ತಾಲ್ಲೂಕುವಾರು ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |
| 4 | ಮತದಾನ ಸ್ಥಗಿತಗೊಂಡು ಮತ್ತು ಮುಂದುವರೆಸಲು ಸಾಧ್ಯವಾಗದ ಮತಗಟ್ಟೆಗಳ ಸಂಖ್ಯೆ (ತಾಲ್ಲೂಕುವಾರು ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | |

| | | | |
|---|---|---|---|
| 5 | ನಿಗದಿಪಡಿಸಿದ ಅವಧಿಗೂ ಮೀರಿ ಮತದಾನ ಮುಂದುವರೆಸಿದ ಮತಗಟ್ಟೆಗಳ ಸಂಖ್ಯೆ (ತಾಲ್ಲೂಕುವಾರು ಮತಗಟ್ಟೆಗಳ ಸಂಖ್ಯೆಯನ್ನು ನಮೂದಿಸುವುದು) | | |
| 6 | ಭದ್ರತಾ ಕೊಠಡಿಯನ್ನು ಸೀಲು ಮಾಡಿದ ಸಮಯ ಮತ್ತು ದಿನಾಂಕ | ಸಮಯ | ದಿನಾಂಕ |
| 7 | ಎಲ್ಲಾ ಪ್ರಿಸೈಡಿಂಗ್ ಅಧಿಕಾರಿಗಳ ದಿನಚರಿ ಮತ್ತು ಇತರೆ ದಾಖಲೆಗಳನ್ನು ಪಡೆಯಲಾಗಿದೆಯೇ | ಹೌದು | ಇಲ್ಲ |

| | | | | | | | | | | | | | |
|---|---|---|---|---|---|---|---|---|---|---|---|---|---|
| 8 | ಒಟ್ಟು ಮತದಾನ | ಒಟ್ಟು ಮತದಾರರ ಸಂಖ್ಯೆ | | | | ಚಲಾಯಿಸಿದ ಮತಗಳ ಸಂಖ್ಯೆ | | | | ಶೇಕಡಾವಾರು | | | |
| | ತಾಲ್ಲೂಕು ಹೆಸರು | ಗಂ | ಹೆ | ಇ | ಒ | ಗಂ | ಹೆ | ಇ | ಒ | ಗಂ | ಹೆ | ಇ | ಒ |
| | | | | | | | | | | | | | |

| | | | | |
|---|---|---|---|---|
| 9 | ಶೇಕಡಾ 90ಕ್ಕೂ ಹೆಚ್ಚು ಮತದಾನವಾದ ಮತಗಟ್ಟೆಗಳ ವಿವರ | ತಾಲ್ಲೂಕು ಹೆಸರು | ಗ್ರಾಮ ಪಂಚಾಯತಿ ಹೆಸರು | ಮತಗಟ್ಟೆ ಸಂಖ್ಯೆ |
| | | | | |
| | | | | |
| | | | | |
| | | | | |
| | | | | |
| | | | | |

ಕಾನೂನು ಮತ್ತು ಸುವ್ಯವಸ್ಥೆ, ನಕಲಿ ಮತದಾನ, ಅನಧಿಕೃತ ಪ್ರವೇಶ, ಮತದಾರರ ಪಟ್ಟಿ, ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಗಳಿಗೆ ಸಂಬಂಧಿಸಿದ ಯಾವುದೇ ಘಟನೆಗಳ ವಿವರಗಳ ಪಟ್ಟಿ ಮಾಡತಕ್ಕದ್ದು.

ಮರು ಮತದಾನದ ಅವಶ್ಯಕತೆ ಇದೆಯೇ

ಹೌದಾದಲ್ಲಿ ವಿವರಗಳು/ ಕಾರಣಗಳು

ಮರು ಮತದಾನ ಉಂಟಾಗಲು ಕಾರಣರಾದ ಜವಾಬ್ದಾರಿ ಹೊರಿಸಬಹುದಾದವರ ವಿವರ

ದಿನಾಂಕ: ಚುನಾವಣಾ ವೀಕ್ಷಕರ ಸಹಿ ಮತ್ತು ಪದನಾಮ

ಸ್ಥಳ:

**ಅನುಬಂಧ–6**

(ಚುನಾವಣಾ ವೀಕ್ಷಕರು ಮತ ಎಣಿಕೆ ಮುಗಿದ ನಂತರ 5ನೇ ವರದಿಯನ್ನು ಕಳುಹಿಸತಕ್ಕದ್ದು.)

**ವೀಕ್ಷಕರ ವರದಿ–5**

| | | |
|---|---|---|
| 1 | ಹೆಸರು ಮತ್ತು ಪದನಾಮ | |
| 2 | ನಿಗದಿಪಡಿಸಿದ ಉಪ ವಿಭಾಗ | |
| 3 | ವರದಿಸಲಾಗುತ್ತಿರುವ ತಾಲ್ಲೂಕಿನ ಹೆಸರು | |

(ತಾಲ್ಲೂಕುವಾರು ನಮೂದಿಸುವುದು)

| | | |
|---|---|---|
| 1 | ವಿತರಿಸಿದ ಅಂಚೆ ಮತಪತ್ರಗಳ ಸಂಖ್ಯೆ | |
| 2 | ಸ್ವೀಕರಿಸಿದ ಅಂಚೆ ಮತಪತ್ರಗಳ ಒಟ್ಟು ಸಂಖ್ಯೆ | |
| 3 | ಕ್ರಮಬದ್ಧವಾದ ಅಂಚೆ ಮತಪತ್ರಗಳು | |
| 4 | ಕ್ರಮಬದ್ಧವಲ್ಲದ ಅಂಚೆ ಮತ ಪತ್ರಗಳು | |

ಚುನಾವಣಾ ಫಲಿತಾಂಶವನ್ನು ನಿಯಮಾನುಸಾರ ಘೋಷಿಸಲಾಗಿದೆಯೇ?        ಹೌದು/ಇಲ್ಲ

ದಿನಾಂಕ:                                        ಚುನಾವಣಾ ವೀಕ್ಷಕರ ಸಹಿ ಮತ್ತು ಪದನಾಮ

ಸ್ಥಳ:

## ಅನುಬಂಧ–7

# THE KARNATAKA OPEN PLACES (PREVENTION OF DISFIGUREMENT) ACT, 1981

**An Act to prevent disfigurement, by unauthorized advertisement of places open to public view in the State of Karnataka.**

Whereas, it is expedient to prevent disfigurement, by unauthorized advertisements of places open to public view in the State of Karnataka.

Be it enacted by the Karnataka State Legislature in the Thirty-second year of the Republic of India as follows:-

1. **Short title and commencement: -** (1) This Act may be called the **Karnataka Open Places (Prevention of Disfigurement) Act, 1981.**

   (2) It shall:-

   (i) be deemed to have come into force in the cities of Bangalore, Mysore, Hubli-Dharwar, Mangalore and Belgaum constituted or continued under the Karnataka Municipal Corporation Act, 1976 or under any law, on the fifth day of May, 1981; and

   (ii) come into force in the municipalities, notified areas, sanitary boards, constituted or continued under the Karnataka Municipalities Act, 1964, or under any other law, or in any other local area, on such date, as the State Government may by notification appoint and different dates may be appointed in respect of different areas.

2. **Definitions :-** In this Act, unless the context otherwise requires:-

   (a) **"Advertisement"** means any printed, cyclostyled, typed or written, notice, document, paper or any other things containing any letter, word, picture, sign or visible representation;

   (b) **"Place open to public view"** includes any private place or building, monument, statue, post, wall fence, tree or contrivance visible to a person being in, or passing along any public place;

   (c) **"Public Place"** means any place (including a road, street or way, whether a thoroughfare or not and a landing place) to which the public or granted access or have a right to resort or over which they have a right to pass.

3. **Penalty for unauthorised disfigurement by advertisements:-** Whoever by himself or through another person affixes to, ore erects, inscribes or exhibits on, any place open to public view any advertisement without the written permission of the local authority having jurisdiction over such area, shall be punished with imprisonment of either description for a term which may extend to six months or with fine which may extend to one thousand rupees or with both:

   Provided that nothing in this section shall apply to any advertisement which:-

   (i) is exhibited within the window of any building if the advertisement relates to the trade, profession or business carried on in that building; or

   (ii) relates to the trade, profession or business carried on within the land or building upon or over which such advertisement is exhibited or to any sale or

letting of such land or building or any effects therein or to any sale, entertainment or meeting to be held on or upon or in the same; or

(iii) relates to the name of the land or building, upon or over which the advertisement is exhibited, or to name of the owner or occupier of such land or building; or

(iv) relates to the business of a railway administration and is exhibited within any railway station or upon any wall or other property of a railway administration.

(v) Is affixed to or exhibited on any ancient and historical monument declared to be of national importance under the Ancient Monuments and Archaeological Sites and Remains Act, 1958 (Central Act XXIV of 1958).

4. **Burden of proof in certain cases: -** Where a person is prosecuted for committing an offence under section 3, the burden of proving that he has the written permission referred to in that section shall be on him.

5. **Punishment for abettors:** - Whoever in any manner whatsoever causes, procures, counsels, aids, abets or is accessory to, the commission to any offence under Section 3 shall on conviction be punished with the punishment provided for the offence.

6. **Offences by companies:** - (1) if the person committing any offence punishable under this Act is a company, every person who, at the time when the offence was committed, was in charge of and responsible to the company, for the conduct of the business of the company, as well as the company, shall be deemed to be guilty of the offence, and shall be liable to be proceeded against and punished accordingly.

   **Explanation. –**For the purpose of this section.-

   (a) **"Company"** means any body corporate and includes a firm or other association of individuals; and

   (b) **"Director"** in relation to a firm, means a partner in the firm.

7. **Indemnity. -** No suit, prosecution or other legal proceeding shall lie against the State Government, any local authority or person for anything which is in good faith done or intended to be done under this Act.

8. **Cognizance of Offences. -** Notwithstanding anything contained in the Code of Criminal Procedure, 1973 (Central Act 2 of 1974) any offence punishable under this Act shall be deemed to be a cognizable offence within the meaning of that code.

9. **Other Laws not affected. -** The provisions of this Act are in addition to, and not in derogation of, the provisions of any other law for the time being in force.

10. **Power to make rules.** - (1) The State Government may make rules for the purpose of carrying out the provisions of this Act.

    (2) Every rule made by the State Government under this Act shall be laid as soon as may be after it is made, before each House of the State Legislature, while it is in session for a total period of 30 days which may be comprised in one session aforesaid, both houses agree in making any modification in the rule of both Houses agree that the rule should not be made, the rule shall thereafter have effect only in

such modification form or be of no effect, as the case may be, so however that any such modification or annulment shall be without prejudice to the validity of anything previously done under that rule.

**CASE LAW**

**S. 10 –** Absence of Rules under this Act – provisions of the Act capable of implementation even in the absence of the Rules – Framing of rules only meant to further the objects of the Act – Explained – The Indian National Trust for Art and Cultural Heritage v State of Karnataka and Another, **1990 (1) of Kar. L. J. 244.**

**11. Repeal and savings. -** (1) The Karnataka Open Places (Prevention of Disfigurement) Ordinance, 1981 (Karnataka Ordinance 10 of 1981) is hereby repealed.

(2) Notwithstanding such repeal anything done or any action taken under the said Ordinance shall be deemed to have been done or taken under this Act.

## ಅನುಬಂಧ – 8

## ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್‌ರಾಜ್ ಅಧಿನಿಯಮ, 1993ರ ಉದ್ಧೃತ ಭಾಗಗಳು

**ಪ್ರಕರಣ 22. ಭ್ರಷ್ಟಾಚಾರಗಳು:**

ಈ ಅಧಿನಿಯಮದ ಉದ್ದೇಶಗಳಿಗಾಗಿ ಈ ಕೆಳಕಂಡವುಗಳನ್ನು ಭ್ರಷ್ಟಾಚಾರಗಳೆಂದು ಭಾವಿಸತಕ್ಕದ್ದು ಎಂದರೆ,

i. ತತ್ಕಾಲದಲ್ಲಿ ಜಾರಿಯಲ್ಲಿರುವ 1951ರ ಜನತಾ ಪ್ರಾತಿನಿಧ್ಯ ಅಧಿನಿಯಮದ(1951ರ ಕೇಂದ್ರಾಧಿನಿಯಮ ಸಂಖ್ಯೆ 48) 123ನೇ ಪ್ರಕರಣದ (1)ನೇ ಖಂಡದಲ್ಲಿ ಅರ್ಥ ವಿವರಿಸಿರುವಂತೆ ಲಂಚಗುಳಿತನ;

ii. ತತ್ಕಾಲದಲ್ಲಿ ಜಾರಿಯಲ್ಲಿರುವ ಸದರಿ ಪ್ರಕರಣದ (2)ನೇ ಖಂಡದಲ್ಲಿ ಅರ್ಥ ವಿವರಿಸಿರುವಂತೆ ಅನುಚಿತ ಪ್ರಭಾವ;

iii. ಅಭ್ಯರ್ಥಿಯು ಚುನಾವಣೆಯಲ್ಲಿ ಜಯಗಳಿಸುವ ಸಂಭವನೀಯತೆಯನ್ನು ಹೆಚ್ಚಿಸಲು ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲ ಪ್ರಭಾವವನ್ನು ಉಂಟು ಮಾಡಲು ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಯಾವನೇ ವ್ಯಕ್ತಿಗೆ ಮತದಾನ ಮಾಡುವಂತೆ ಅಥವಾ ಮಾಡದಿರುವಂತೆ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಒಪ್ಪಿಗೆಯೊಡನೆ ಯಾವನೇ ಇತರ ವ್ಯಕ್ತಿಯು ಮಾಡಿದ ಮನವಿ ಅಥವಾ ಧಾರ್ಮಿಕ ಸಂಕೇತಗಳ ಬಳಕೆ ಅಥವಾ ಅವುಗಳನ್ನು ಉದ್ದೇಶಿಸಿ ಮನವಿ ಅಥವಾ ರಾಷ್ಟ್ರಧ್ವಜ, ರಾಷ್ಟ್ರಲಾಂಛನಗಳಂಥ ರಾಷ್ಟ್ರದ ಸಂಕೇತಗಳ ಬಳಕೆ ಅಥವಾ ಅವುಗಳನ್ನು ಉದ್ದೇಶಿಸಿ ಮನವಿ;

iv. ಅಭ್ಯರ್ಥಿಯ ಚುನಾವಣೆಯಲ್ಲಿ ಜಯಗಳಿಸುವ ಸಂಭವನೀಯತೆಯನ್ನು ಹೆಚ್ಚಿಸುವುದಕ್ಕಾಗಿ ಅಥವಾ ಯಾವನೇ ಅಭ್ಯರ್ಥಿಯ ಚುನಾವಣೆಗೆ ಪ್ರತಿಕೂಲ ಪ್ರಭಾವ ಉಂಟುಮಾಡುವುದಕ್ಕಾಗಿ ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಭಾರತದ ಪ್ರಜೆಗಳ ವಿವಿಧ ವರ್ಗಗಳ ನಡುವೆ ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ವೈರತ್ವ ಅಥವಾ ದ್ವೇಷದ ಭಾವನೆಗಳನ್ನು ಉಂಟುಮಾಡಲು ಉತ್ತೇಜನ ನೀಡುವುದು ಅಥವಾ ಉತ್ತೇಜನ ನೀಡಲು ಪ್ರಯತ್ನಿಸುವುದು;

v. ಅಭ್ಯರ್ಥಿಯು ಅಥವಾ ಅವನ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಇತರ ಯಾವನೇ ವ್ಯಕ್ತಿಯು, ಯಾವನೇ ಅಭ್ಯರ್ಥಿಯ ವೈಯಕ್ತಿಕ ಚಾರಿತ್ರ್ಯ ಅಥವಾ ನಡತೆಯ ಸಂಬಂಧದಲ್ಲಿ ಅಥವಾ ಉಮೇದುವಾರಿಕೆಗೆ ಅಥವಾ ಯಾವುದೇ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಂಬಂಧಪಟ್ಟಂತೆ ಸುಳ್ಳು ವಿವರಣೆಯನ್ನು ಅಥವಾ ತಾನು ಸುಳ್ಳೆಂದು ನಂಬುವ ಅಥವಾ ಸತ್ಯವೆಂದು ನಂಬದ ಅಭ್ಯರ್ಥಿಯು ಚುನಾವಣೆಯಲ್ಲಿ ಗೆದ್ದು ಬರುವುದಕ್ಕೆ ಸಮಂಜಸ ರೀತಿಯಲ್ಲಿ ಪ್ರತಿಕೂಲ ಪ್ರಭಾವ ಬೀರಬಹುದಾದಂಥ ವಿಷಯವನ್ನು ಪ್ರಕಟಿಸುವುದು;

vi. ಅಭ್ಯರ್ಥಿಯು ಅಥವಾ ಏಜೆಂಟನು ಅಥವಾ ಅಭ್ಯರ್ಥಿಯ ಅಥವಾ ಅವನ ಏಜೆಂಟನ ಸಮ್ಮತಿಯಿಂದ ಯಾವನೇ ಇತರ ವ್ಯಕ್ತಿಯು ಯಾವುದೇ ವಾಹನವನ್ನು ಅಥವಾ ನಾವೆಯನ್ನು (ಸ್ವತ: ಅಭ್ಯರ್ಥಿ ಅವನ ಕುಟುಂಬದ ಸದಸ್ಯರು ಅಥವಾ ಅವನ ಏಜೆಂಟನನ್ನು ಹೊರತುಪಡಿಸಿ) ಯಾವನೇ ಮತದಾರನನ್ನು ಉಚಿತವಾಗಿ, ಈ ಅಧಿನಿಯಮದ ಅಡಿಯಲ್ಲಿ ನಿಯಮಗಳಿಗನುಸಾರವಾಗಿ ಏರ್ಪಡಿಸಿರುವ ಯಾವುದೇ ಮತದಾನ ಕೇಂದ್ರಕ್ಕೆ ಬರಲು ಅಥವಾ

ಮತದಾನ ಕೇಂದ್ರದಿಂದ ಹಿಂದಿರುಗಿ ಹೋಗಲು ಆ ವಾಹನ ಅಥವಾ ನಾವೆಯನ್ನು ಹಣ ಸಂದಾಯದ ಮೇಲಾಗಲೀ ಅಥವಾ ಅನ್ಯಥಾ ಬಾಡಿಗೆಗೆ ಗೊತ್ತುಪಡಿಸುವುದು ಅಥವಾ ಪಡೆಯುವುದು;

ಪರಂತು ಅಂಥ ಯಾವುದೇ ಮತದಾನ ಕೇಂದ್ರಕ್ಕೆ ಅಥವಾ ಮತದಾನ ಮಾಡಲು ನಿಗದಿಪಡಿಸಿದ ಸ್ಥಳಕ್ಕೆ ಬರಲು ಅಥವಾ ಅಲ್ಲಿಂದ ಹಿಂದಿರುಗಲು ಯಾವುದೇ ಸಾರ್ವಜನಿಕ ಸಾರಿಗೆ ವಾಹನವನ್ನು ಅಥವಾ ನಾವೆಯನ್ನು ಅಥವಾ ರೈಲು ಕ್ಯಾರೇಜನ್ನು ಮತದಾರನು ಅವನ ಖರ್ಚಿನಲ್ಲಿ ಉಪಯೋಗಿಸುವುದನ್ನು ಈ ಖಂಡದ ಅಡಿಯಲ್ಲಿ ಭ್ರಷ್ಟಾಚಾರವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ:–** ಈ ಖಂಡದಲ್ಲಿ "ವಾಹನ" ಎಂದರೆ ಯಂತ್ರಚಾಲಿತವಾದುದಾಗಿರಬಹುದು ಅಥವಾ ಅನ್ಯಥಾ ಚಾಲಿತವಾದುದಾಗಿರಬಹುದು ಅಥವಾ ಇತರ ವಾಹನಗಳನ್ನು ಎಳೆಯಲು ಉಪಯೋಗಿಸ ಬಹುದಾದುದಾಗಿರಬಹುದು ಅಥವಾ ಅನ್ಯಥಾ ಉಪಯೋಗಿಸಬಹುದಾದುದಾಗಿರಬಹುದು, ರಸ್ತೆ ಸಾರಿಗೆಯ ಉದ್ದೇಶಕ್ಕಾಗಿ ಬಳಸಿದ ಅಥವಾ ಬಳಕೆಗೆ ಯೋಗ್ಯವಾದ ಯಾವುದೇ ವಾಹನ,

vii. ಯಾವುದೇ ಸಭೆಯನ್ನು ನಡೆಸುವುದು ಅಲ್ಲಿ ಮಾದಕ ಪಾನೀಯಗಳನ್ನು ಸರಬರಾಜು ಮಾಡುವುದು;

viii. ಮುದ್ರಕ ಮತ್ತು ಪ್ರಕಾಶಕರ ಹೆಸರು ಮತ್ತು ವಿಳಾಸವನ್ನು ಹೊಂದಿರದ ಯಾವುದೇ ಸುತ್ತೋಲೆ, ಪ್ರಕಟಣಾ ಪತ್ರ ಅಥವಾ ಭಿತ್ತಿಪತ್ರಗಳನ್ನು ಚುನಾವಣೆಯ ಸಂಬಂಧದಲ್ಲಿ ಹೊರಡಿಸುವುದು;

ix. ಸರ್ಕಾರವು ನಿಯಮದ ಮೂಲಕ ಭ್ರಷ್ಟಾಚಾರವೆಂದು ನಿರ್ದಿಷ್ಟಪಡಿಸಬಹುದಾದಂಥ ಇತರ ಯಾವುದೇ ಆಚರಣೆ.

**ಪ್ರಕರಣ 26. ಮತದಾನದ ಕೇಂದ್ರದಲ್ಲಿ ಅಥವಾ ಅದರ ಬಳಿಯಲ್ಲಿ ಚುನಾವಣಾ ಪ್ರಚಾರದ ನಿಷೇಧ:–**

(1) ಯಾವನೇ ವ್ಯಕ್ತಿಯು ಯಾವುದೇ ಮತದಾನದ ಕೇಂದ್ರದಲ್ಲಿ ಮತದಾನ ನಡೆಯುವ ದಿನಾಂಕದಂದು ಅಥವಾ ದಿನಾಂಕಗಳಲ್ಲಿ ಮತದಾನ ಕೇಂದ್ರದೊಳಗೆ ಅಥವಾ ಮತದಾನ ಕೇಂದ್ರದಿಂದ ನೂರು ಮೀಟರುಗಳ ಅಂತರದೊಳಗಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಕೆಳಕಂಡ ಯಾವುದೇ ಕಾರ್ಯಗಳನ್ನು ಮಾಡತಕ್ಕದ್ದಲ್ಲ. ಎಂದರೆ

ಎ) ಮತಗಳಿಗಾಗಿ ಪ್ರಚಾರ ಮಾಡುವುದು ಅಥವಾ

ಬಿ) ಯಾವನೇ ಮತದಾರನ ಮತವನ್ನು ಕೋರುವುದು ಅಥವಾ

ಸಿ) ಯಾವನೇ ನಿರ್ದಿಷ್ಟ ಅಭ್ಯರ್ಥಿಗೆ ಮತ ನೀಡಬಾರದೆಂದು ಯಾವನೇ ಮತದಾರನ ಮನ ಒಲಿಸುವುದು ಅಥವಾ

ಡಿ) ಚುನಾವಣೆಯಲ್ಲಿ ಮತ ನೀಡದಂತೆ ಯಾವನೇ ಮತದಾರನ ಮನ ಒಲಿಸುವುದು ಅಥವಾ

ಇ) ಯಾವುದೇ ನೋಟೀಸು (ಚುನಾವಣೆಗೆ ಸಂಬಂಧಿಸಿದ ಅಧಿಕೃತ ನೋಟೀಸಿನ ಹೊರತು) ಅಥವಾ ಚಿಹ್ನೆಯನ್ನು ಪ್ರದರ್ಶಿಸುವುದು.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

3) ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು

**ಪ್ರಕರಣ 27. ಮತದಾನ ಕೇಂದ್ರಗಳಲ್ಲಿ ಅಥವಾ ಅವುಗಳ ಹತ್ತಿರ ಅನುಚಿತ ನಡತೆಗಾಗಿ ದಂಡನೆ:**

(1) ಯಾವನೇ ವ್ಯಕ್ತಿಯು ಯಾವುದೇ ಮತದಾನ ಕೇಂದ್ರದಲ್ಲಿ ಮತದಾನ ನಡೆಯುವಂಥ ದಿನಾಂಕದಂದು ಅಥವಾ ದಿನಾಂಕಗಳಂದು

ಎ) ಮತದಾನ ಕೇಂದ್ರದೊಳಗೆ ಅಥವಾ ಅದರ ಪ್ರವೇಶ ದ್ವಾರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮನುಷ್ಯನ ಧ್ವನಿಯನ್ನು ವರ್ಧಿಸಲು ಅಥವಾ ಯಥಾವತ್ತಾಗಿ ನಿರೂಪಿಸುವುದಕ್ಕಾಗಿ ಮೆಗಾಫೋನ್ ಅಥವಾ ಧ್ವನಿವರ್ಧಕದಂಥ ಯಾವುದೇ ಸಲಕರಣೆಯನ್ನು ಉಪಯೋಗಿಸತಕ್ಕದ್ದಲ್ಲ ಅಥವಾ ಚಾಲನೆ ಮಾಡತಕ್ಕದ್ದಲ್ಲ.

ಬಿ) ಮತದಾನ ಕೇಂದ್ರದಲ್ಲಿ ಅಥವಾ ಅದರ ಅಕ್ಕಪಕ್ಕದಲ್ಲಿನ ಯಾವುದೇ ಸಾರ್ವಜನಿಕ ಅಥವಾ ಖಾಸಗಿ ಸ್ಥಳದಲ್ಲಿ ಮತದಾನಕ್ಕಾಗಿ ಮತದಾನ ಕೇಂದ್ರಕ್ಕೆ ಭೇಟಿ ಕೊಡುವ ಯಾವನೇ ವ್ಯಕ್ತಿಗೆ ಕಿರುಕುಳ ಉಂಟು ಮಾಡುವ ಹಾಗೆ ಅಥವಾ ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಮತ್ತು ಇತರ ವ್ಯಕ್ತಿಗಳ ಕೆಲಸಕ್ಕೆ ಅಡ್ಡಿಯುಂಟು ಮಾಡುವ ಹಾಗೆ ಗಟ್ಟಿಯಾಗಿ ಕೂಗಾಡತಕ್ಕದ್ದಲ್ಲ ಅಥವಾ ಅನ್ಯಥಾ ಅನುಚಿತ ರೀತಿಯಲ್ಲಿ ನಡೆದುಕೊಳ್ಳತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಅಥವಾ ಉಲ್ಲಂಘಿಸಲು ಉದ್ದೇಶ ಪೂರ್ವಕವಾಗಿ ಸಹಾಯ ಮಾಡುವ ಅಥವಾ ದುಷ್ಪ್ರೇರಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳಿಗೆ ವಿಸ್ತರಿಸಬಹುದಾದಂಥ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ರವರು ಯಾವನೇ ವ್ಯಕ್ತಿಯು ಈ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ ಅವರು ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡುವಂತೆ ಯಾವನೇ ಪೋಲಿಸ್ ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಆ ತರುವಾಯ ಪೊಲೀಸ್ ಅಧಿಕಾರಿಯು ಅವನನ್ನು ದಸ್ತಗಿರಿ ಮಾಡತಕ್ಕದ್ದು.

(4) ಯಾವನೇ ಪೊಲೀಸ್ ಅಧಿಕಾರಿಯು (1)ನೇ ಉಪ ಪ್ರಕರಣದ ಉಪಬಂಧಗಳ ಯಾವುದೇ ಉಲ್ಲಂಘನೆಯನ್ನು ತಡೆಗಟ್ಟುವುದಕ್ಕಾಗಿ ಯುಕ್ತವಾಗಿ ಅವಶ್ಯವಾಗಬಹುದಾದಂಥ ಕ್ರಮಗಳನ್ನು ಕೈಗೊಳ್ಳಬಹುದು ಮತ್ತು ಅಂಥ ಬಲವನ್ನು ಪ್ರಯೋಗಿಸಬಹುದು ಮತ್ತು ಅಂಥ ಉಲ್ಲಂಘನೆಗಾಗಿ ಉಪಯೋಗಿಸಿದ ಯಾವುದೇ ಸಲಕರಣೆಯನ್ನು ವಶಪಡಿಸಿಕೊಳ್ಳಬಹುದು.

**ಪ್ರಕರಣ 28. ಮತದಾನ ಕೇಂದ್ರದಲ್ಲಿ ದುರ್ನಡತೆಗಾಗಿ ದಂಡನೆ:**

(1) ಯಾವುದೇ ಮತದಾನ ಕೇಂದ್ರದಲ್ಲಿ ಮತದಾನಕ್ಕಾಗಿ ನಿಗದಿಪಡಿಸಿದ ವೇಳೆಗಳಲ್ಲಿ ಯಾವನೇ ವ್ಯಕ್ತಿಯು ದುರ್ವರ್ತಿಸಿದರೆ ಅಥವಾ ಪ್ರಿಸೈಡಿಂಗ್ ಆಫೀಸರ್ ಅವರ ಕಾನೂನು ಸಮ್ಮತ ನಿರ್ದೇಶನಗಳನ್ನು ಪಾಲಿಸಲು ತಪ್ಪಿದರೆ ಪ್ರಿಸೈಡಿಂಗ್ ಆಫೀಸರ್ ಅವರು ಅಥವಾ ಕರ್ತವ್ಯ ನಿರ್ವಹಿಸುತ್ತಿರುವ ಯಾವನೇ ಪೊಲೀಸ್ ಅಧಿಕಾರಿಯು ಅಥವಾ ಆ ಬಗ್ಗೆ ಪ್ರಿಸೈಡಿಂಗ್ ಆಫೀಸರ್ ಅವರು ಅಧಿಕಾರ ನೀಡಿರುವಂಥ ಯಾವನೇ ವ್ಯಕ್ತಿಯು ಅವನನ್ನು ಮತದಾನ ಕೇಂದ್ರದಿಂದ ಹೊರಹಾಕಬಹುದು.

(2) (1)ನೇ ಉಪ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಮತದಾನ ಕೇಂದ್ರದಲ್ಲಿ ಮತ ನೀಡಲು ಅಥವಾ ಅನ್ಯಥಾ ಹಕ್ಕುಳ್ಳವನಾಗಿರುವ ಯಾವನೇ ಮತದಾರರನ್ನು ಆ ಕೇಂದ್ರದಲ್ಲಿ ಮತ ನೀಡುವ ಅವಕಾಶ ಹೊಂದಿರುವುದನ್ನು ಅಡ್ಡಿಪಡಿಸುವ ಹಾಗೆ ಚಲಾಯಿಸತಕ್ಕದ್ದಲ್ಲ.

(3) ಮತದಾನ ಕೇಂದ್ರದಿಂದ ಹಾಗೆ ಹೊರಹಾಕಲಾದ ಯಾವನೇ ವ್ಯಕ್ತಿಯು ಪ್ರಿಸೈಡಿಂಗ್ ಆಫೀಸರನ ಅನುಮತಿಯಿಲ್ಲದೆ ಮತದಾನ ಕೇಂದ್ರವನ್ನು ಪುನ: ಪ್ರವೇಶಿಸಿದರೆ ಅವನು ಅಪರಾಧ ನಿರ್ಣಯವಾದ ಮೇಲೆ ಮೂರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(4) (3)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದು

**ಪ್ರಕರಣ 29. ಮತದಾನದ ರಹಸ್ಯವನ್ನು ಕಾಪಾಡುವುದು**

(1) ಯಾವುದೇ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವುದು ಮತ್ತು ಎಣಿಸುವುದಕ್ಕೆ ಸಂಬಂಧಿಸಿದ ಯಾವುದೇ ಕರ್ತವ್ಯವನ್ನು ನೆರವೇರಿಸುವ ಪ್ರತಿಯೊಬ್ಬ ಅಧಿಕಾರಿ, ಗುಮಾಸ್ತ, ಏಜೆಂಟ್ ಅಥವಾ ಇತರ ವ್ಯಕ್ತಿಯು ಮತದಾನದ ರಹಸ್ಯವನ್ನು ಕಾಪಾಡತಕ್ಕದ್ದು ಮತ್ತು ಕಾಪಾಡಲು ಸಹಾಯ ಮಾಡತಕ್ಕದ್ದು ಮತ್ತು (ಯಾವುದೇ ಕಾನೂನಿನ ಮೂಲಕ ಅಥವಾ ಅದರ ಅಡಿಯಲ್ಲಿ ಅಧಿಕೃತಗೊಳಿಸಿದ ಯಾವುದೇ ಉದ್ದೇಶಕ್ಕಾಗಿ ಹೊರತು) ಅಂಥ ರಹಸ್ಯವನ್ನು ಭಂಗಗೊಳಿಸುವುದೆಂದು ಪರಿಗಣಿಸುವಂಥ ಯಾವುದೇ ಮಾಹಿತಿಯನ್ನು ಯಾವನೇ ವ್ಯಕ್ತಿಗೆ ತಿಳಿಸತಕ್ಕದ್ದಲ್ಲ.

(2) ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ 3 ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪ್ರಕರಣ 30. ಚುನಾವಣೆಯಲ್ಲಿ ಅಧಿಕಾರಿಗಳು ಮೊದಲಾದವರು ಅಭ್ಯರ್ಥಿಗಳ ಪರವಾಗಿ ಕೆಲಸ ಮಾಡತಕ್ಕದ್ದಲ್ಲ ಅಥವಾ ಮತದಾನದ ಮೇಲೆ ಪ್ರಭಾವ ಬೀರತಕ್ಕದ್ದಲ್ಲ.**

(1) ಯಾವುದೇ ಚುನಾವಣೆಯಲ್ಲಿ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿರುವ ಅಥವಾ ಪೋಲಿಂಗ್ ಆಫೀಸರ್ ಆಗಿರುವ ಯಾವನೇ ವ್ಯಕ್ತಿಯು ಅಥವಾ ಚುನಾವಣೆಗೆ ಸಂಬಂಧಿಸಿದಂತೆ ಯಾವುದೇ ಕರ್ತವ್ಯವನ್ನು ನೆರವೇರಿಸಲು ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ನೇಮಕ ಮಾಡಿದ ಯಾವನೇ ಅಧಿಕಾರಿ ಅಥವಾ ಗುಮಾಸ್ತನು (ಮತ ಕೊಡುವುದನ್ನು ಹೊರತುಪಡಿಸಿ) ಅಭ್ಯರ್ಥಿಯು ಚುನಾವಣೆಯಲ್ಲಿ ಗೆಲ್ಲುವ ಸಂಭವವನ್ನು ಹೆಚ್ಚಿಸುವುದಕ್ಕಾಗಿ ಆ ಚುನಾವಣೆಯನ್ನು ನಡೆಸುವಲ್ಲಿ ಅಥವಾ ಅದರ ಮೇಲ್ವಿಚಾರಣೆಯಲ್ಲಿ ಯಾವುದೇ ಕಾರ್ಯವನ್ನು ಮಾಡತಕ್ಕದ್ದಲ್ಲ.

(2) ಹಿಂದೆ ಹೇಳಿದಂಥ ಯಾವನೇ ಅಂಥ ವ್ಯಕ್ತಿಯು ಮತು ಪೊಲೀಸು ದಳದ ಯಾವನೇ ಸದಸ್ಯನು:

ಎ) ಚುನಾವಣೆಯಲ್ಲಿ ಅವನ ಮತವನ್ನು ಕೊಡಲು ಯಾವನೇ ವ್ಯಕ್ತಿಯ ಮನವೊಲಿಸಲು ಅಥವಾ

ಬಿ) ಚುನಾವಣೆಯಲ್ಲಿ ಅವನ ಮತ ನೀಡದಂತೆ ಯಾವನೇ ವ್ಯಕ್ತಿಯನ್ನು ವಿಮುಖಗೊಳಿಸಲು ಅಥವಾ

ಸಿ) ಯಾವುದೇ ರೀತಿಯಲ್ಲಿ ಚುನಾವಣೆಯಲ್ಲಿ ಯಾವನೆ ವ್ಯಕ್ತಿಯ ಮತದಾನದ ಮೇಲೆ ಪ್ರಭಾವ ಬಿರಲು, ಪ್ರಯತ್ನಿಸತಕ್ಕದ್ದಲ್ಲ.

3) (1)ನೇ ಉಪ ಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳುಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

4) (2)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ 31. ಚುನಾವಣೆಗಳಿಗೆ ಸಂಬಂಧಿಸಿದ ಸರ್ಕಾರಿ ಕರ್ತವ್ಯದ ಭಂಗ:**

1) ಈ ಪ್ರಕರಣವು ಅನ್ವಯವಾಗುವ ಯಾವನೇ ವ್ಯಕ್ತಿಯು ಯುಕ್ತ ಕಾರಣವಿಲ್ಲದೆ ತನ್ನ ಸರ್ಕಾರಿ ಕರ್ತವ್ಯವನ್ನು ಭಂಗ ಮಾಡಿ ಯಾವುದೇ ಕಾರ್ಯದ ಅಥವಾ ಲೋಪದ ತಪ್ಪಿತಸ್ಥನಾಗಿದ್ದರೆ ಅವನು ಅಪರಾಧ ನಿರ್ಣಯವಾದ ಮೇಲೆ 500 ರೂ.ಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

2) (1) ನೇ ಉಪ ಪ್ರಕರಣದ ಅಡಿಯಲ್ಲಿನ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

3) ಹಿಂದೆ ಹೇಳಿದಂಥ ಯಾವುದೇ ಕಾರ್ಯಕ್ಕೆ ಅಥವಾ ಲೋಪಕ್ಕೆ ಸಂಬಂಧಿಸಿದಂತೆ ಹಾನಿ ಪರಿಹಾರಕ್ಕಾಗಿ ಯಾವನೇ ಅಂಥ ವ್ಯಕ್ತಿಯ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಗಳನ್ನು ಹೂಡತಕ್ಕದ್ದಲ್ಲ.

4) ಈ ಪ್ರಕರಣವು ಅನ್ವಯವಾಗುವ ವ್ಯಕ್ತಿಗಳು ಯಾರೆಂದರೆ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರ್, ಪೋಲಿಂಗ್ ಆಫೀಸರ್ ಮತ್ತು ನಾಮಪತ್ರಗಳನ್ನು ಸ್ವೀಕರಿಸುವ ಅಥವಾ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವ ಅಥವಾ ಚುನಾವಣೆಯಲ್ಲಿ ಮತಗಳನ್ನು ದಾಖಲು ಮಾಡುವ ಅಥವಾ ಎಣಿಕೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ಕರ್ತವ್ಯವನ್ನು ನಿರ್ವಹಿಸಲು ನಿಯೋಜಿತನಾದ ಯಾವನೇ ವ್ಯಕ್ತಿ ಮತ್ತು ಈ ಪ್ರಕರಣದ ಉದ್ದೇಶಕ್ಕಾಗಿ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯನ್ನು ಈ ಪ್ರಕರಣದ ಉದ್ದೇಶಕ್ಕಾಗಿ ತದನುಸಾರವಾಗಿ ಅರ್ಥೈಸತಕ್ಕದ್ದು. ಆದರೆ ಅದು ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಲ್ಲದೆ ಬೇರೆ ರೀತಿಯಲ್ಲಿ ವಿಧಿಸಿದ ಕರ್ತವ್ಯಗಳನ್ನು ಒಳಗೊಳ್ಳತಕ್ಕದ್ದಲ್ಲ.

**ಪ್ರಕರಣ 31.ಎ. ಮತಗಟ್ಟೆಯನ್ನು ವಶಪಡಿಸಿಕೊಂಡ ಅಪರಾಧ–**

ಮತಗಟ್ಟೆಯನ್ನು ವಶಪಡಿಸಿಕೊಳ್ಳುವ ಅಪರಾಧವನ್ನು ಮಾಡುವ ಯಾವೊಬ್ಬ ವ್ಯಕ್ತಿಯು ಆರು ತಿಂಗಳುಗಳಿಗೆ ಕಡಿಮೆಯಿಲ್ಲದ ಆದರೆ ಎರಡು ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು ಮತ್ತು ಅಂಥ ಅಪರಾಧವನ್ನು ಸರ್ಕಾರದ ಸೇವೆಯಲ್ಲಿರುವ ವ್ಯಕ್ತಿಯು ಮಾಡಿರುವಲ್ಲಿ ಆತನು ಒಂದು ವರ್ಷಕ್ಕೆ ಕಡಿಮೆಯಿಲ್ಲದ ಆದರೆ 3 ವರ್ಷಗಳವರೆಗಿರಬಹುದಾದ ಕಾರಾವಾಸ ಮತ್ತು ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ವಿವರಣೆ;** ಈ ಪ್ರಕರಣದ ಉದ್ದೇಶಕ್ಕಾಗಿ ಮತಗಟ್ಟೆಯನ್ನು ವಶಪಡಿಸಿಕೊಳ್ಳುವುದು ಎಂಬುದರಲ್ಲಿ ಇತರ ವಿಷಯಗಳ ಜೊತೆಗೆ ಈ ಮುಂದಿನ ಎಲ್ಲ ಅಥವಾ ಯಾವುದೇ ಕಾರ್ಯಚಟುವಟಿಕೆಗಳು ಸೇರುತ್ತವೆ ಎಂದರೆ–

ಎ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ವಶಕ್ಕೆ ತೆಗೆದುಕೊಂದು ಮತದಾನ ಕೇಂದ್ರದ ಅಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಚುನಾವಣೆಗಳ ಮೇಲೆ ಪರಿಣಾಮ ಬೀರುವಂಥ ಇತರ ಯಾವುದೇ ಕೃತ್ಯವನ್ನು ಮಾಡುವುದು.

ಬಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತದಾನ ಕೇಂದ್ರವನ್ನು ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳವನ್ನು ಸ್ವಾಧೀನಕ್ಕೆ ತೆಗೆದುಕೊಂಡು ತನ್ನ ಅಥವಾ ತಮ್ಮ ಬೆಂಬಲಿಗರಿಗೆ ಮಾತ್ರ ತಮ್ಮ ಮತದಾನದ ಹಕ್ಕನ್ನು ಚಲಾಯಿಸಲು ಅನುಮತಿಸಿ ಇತರರು ಮತ ನೀಡದಂತೆ ಅಡ್ಡಿಪಡಿಸುವುದು.

ಸಿ) ಯಾವೊಬ್ಬ ಮತದಾರರನ್ನು ಬೆದರಿಸಿ ಆತನು ಮತದಾನ ಕೇಂದ್ರಕ್ಕೆ ಅಥವಾ ಮತದಾನಕ್ಕಾಗಿ ನಿಗದಿಪಡಿಸಲಾದ ಸ್ಥಳಕ್ಕೆ ಹೋಗಿ ತನ್ನ ಮತ ನೀಡದಂತೆ ಅಡ್ಡಿಪಡಿಸುವುದು.

ಡಿ) ಯಾವೊಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳು ಮತಗಳ ಎಣಿಕೆ ನಡೆಯುತ್ತಿರುವ ಸ್ಥಳವನ್ನು ವಶಕ್ಕೆ ತೆಗೆದುಕೊಂದು ಮತಗಳ ಎಣಿಕೆ ಮಾಡುತ್ತಿರುವ ಅಧಿಕಾರಿಗಳು ಮತಪತ್ರಗಳನ್ನು ಅಥವಾ ಮತದಾನ ಯಂತ್ರಗಳನ್ನು ಒಪ್ಪಿಸುವಂತೆ ಮಾಡುವುದು ಮತ್ತು ಕ್ರಮಬದ್ಧವಾಗಿ ನಡೆಯುತ್ತಿರುವ ಮತಗಳ ಎಣಿಕೆಯ ಮೇಲೆ ಪರಿಣಾಮ ಬೀರುವಂಥ ಯಾವುದಾದರೂ ಕೃತ್ಯವನ್ನು ಮಾಡುವುದು

ಇ) ಸರ್ಕಾರದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಸದರಿ ಕಾರ್ಯಚಟುವಟಿಕೆಗಳಲ್ಲಿ ಎಲ್ಲ ಅಥವಾ ಯಾವುದೇ ಕಾರ್ಯ ಚಟುವಟಿಕೆಯನ್ನು ಮಾಡುವುದು ಅಥವಾ ಅಭ್ಯರ್ಥಿಯು ಚುನಾಯಿತನಾಗುವ ಸಾಧ್ಯತೆಯನ್ನು ಹೆಚ್ಚಿಸುವಂಥ ಯಾವುದೇ ಕಾರ್ಯ ಚಟುವಟಿಕೆಗಳಿಗೆ ನೆರವು ನೀಡುವುದು ಅಥವಾ ಪರೋಕ್ಷ ಸಮ್ಮತಿ ನೀಡುವುದು.

**ಪ್ರಕರಣ 31.ಬಿ. ಚುನಾವಣಾ ಏಜೆಂಟ್, ಮತದಾನ ಏಜೆಂಟ್ ಅಥವಾ ಎಣಿಕೆ ಏಜೆಂಟರಾಗಿ ಕಾರ್ಯನಿರ್ವಹಿಸುವ ಸರ್ಕಾರಿ ನೌಕರರುಗಳಿಗೆ ದಂಡನೆ ವಿಧಿಸುವುದು:**

ಸರ್ಕಾರದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು ಚುನಾವಣೆಯಲ್ಲಿ ಅಭ್ಯರ್ಥಿಯ ಚುನಾವಣಾ ಏಜೆಂಟ್ ಅಥವಾ ಮತದಾನ ಏಜೆಂಟ್ ಅಥವಾ ಎಣಿಕೆ ಎಜೆಂಟನಾಗಿ ಕೆಲಸ ಮಾಡಿದರೆ ಆತನು 3 ತಿಂಗಳುಗಳವರೆಗಿರಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪ್ರಕರಣ 32. ಮತದಾನ ಕೇಂದ್ರಗಳಿಂದ ಮತಪತ್ರಗಳನ್ನು ತೆಗೆದುಕೊಂಡು ಹೋಗುವುದು ಅಪರಾಧ:**

1) ಯಾವುದೇ ಚುನಾವಣೆಯಲ್ಲಿ ಯಾವನೇ ವ್ಯಕ್ತಿಯ ಮತದಾನ ಕೇಂದ್ರದಿಂದ ಮತಪತ್ರವನ್ನು ಮೋಸದಿಂದ ತೆಗೆದುಕೊಂಡು ಹೋದರೆ ಅಥವಾ ತೆಗೆದುಕೊಂಡು ಹೋಗಲು ಪ್ರಯತ್ನಿಸಿದರೆ ಅಥವಾ ಅಂಥ ಯಾವುದೇ ಕಾರ್ಯವನ್ನು ಮಾಡಲು ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ ಅವನು ಅಪರಾಧ ನಿರ್ಣಯವಾದ ಮೇಲೆ ಒಂದು ವರ್ಷಕ್ಕೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

2) ಮತದಾನ ಕೇಂದ್ರದ ಪ್ರಿಸೈಡಿಂಗ್ ಆಫೀಸರ್ ಅವರಿಗೆ ಯಾವನೇ ವ್ಯಕ್ತಿಯು (1)ನೇ ಉಪ ಪ್ರಕರಣದ ಮೇರೆಗೆ ದಂಡನೀಯವಾದ ಅಪರಾಧವನ್ನು ಮಾಡುತ್ತಿರುವನೆಂದು ಅಥವಾ ಮಾಡಿದ್ದಾನೆಂದು ನಂಬಲು ಕಾರಣವಿದ್ದರೆ ಅಂಥ ಅಧಿಕಾರಿಯು ಅಂಥ ವ್ಯಕ್ತಿಯು ಮತದಾನ ಕೇಂದ್ರವನ್ನು ಬಿಡುವುದಕ್ಕೆ ಮುಂಚೆ ಅಂಥ ವ್ಯಕ್ತಿಯನ್ನು ದಸ್ತಗಿರಿ ಮಾಡಬಹುದು ಅಥವಾ ದಸ್ತಗಿರಿ ಮಾಡಲು ಪೊಲೀಸು ಅಧಿಕಾರಿಗೆ ನಿರ್ದೇಶಿಸಬಹುದು ಮತ್ತು ಅಂಥ ವ್ಯಕ್ತಿಯನ್ನು ಶೋಧಿಸಬಹುದು ಅಥವಾ ಪೊಲೀಸು ಅಧಿಕಾರಿಯು ಅವನನ್ನು ಶೋಧಿಸುವಂತೆ ಮಾಡಬಹುದು.

ಪರಂತು ಮಹಿಳೆಯ ಶೋಧನೆಯನ್ನು ಮಾಡಿಸುವ ಅವಶ್ಯಕತೆಯುಂಟಾದಾಗ ಶೋಧನೆಯನ್ನು ಬೇರೊಬ್ಬ ಮಹಿಳೆಯಿಂದ ಸಭ್ಯತೆಗೆ ಕಟ್ಟುನಿಟ್ಟಾಗಿ ಗಮನಕೊಟ್ಟು ಮಾಡಿಸತಕ್ಕದ್ದು.

3) ಶೋಧನೆಯ ತರುವಾಯ ದಸ್ತಗಿರಿಯಾದ ವ್ಯಕ್ತಿಯ ಬಳಿ ಸಿಕ್ಕಿದ ಯಾವುದೇ ಮತಪತ್ರವನ್ನು ಪ್ರಿಸೈಡಿಂಗ್ ಅಧಿಕಾರಿ ಅವರು ಪೊಲೀಸು ಅಧಿಕಾರಿಗೆ ಸುರಕ್ಷಿತ ಅಭಿರಕ್ಷೆಗಾಗಿ ಒಪ್ಪಿಸತಕ್ಕದ್ದು ಅಥವಾ ಪೊಲೀಸ್ ಅಧಿಕಾರಿಯೇ ಶೋಧನೆ ಮಾಡಿದಾಗ ಅಂಥ ಅಧಿಕಾರಿಯು ಅದನ್ನು ಸುರಕ್ಷಿತ ಅಭಿರಕ್ಷೆಯಲ್ಲಿಟ್ಟುಕೊಳ್ಳತಕ್ಕದು.

4) (1)ನೇ ಉಪ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ 33. ಇತರ ಅಪರಾಧಗಳು ಮತ್ತು ಅವುಗಳಿಗಾಗಿ ದಂಡನೆಗಳು:**

1) ಯಾವುದೇ ಚುನಾವಣೆಯಲ್ಲಿ ವ್ಯಕ್ತಿಯು ಅವನು–

ಎ) ಯಾವುದೇ ನಾಮಪತ್ರವನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

ಬಿ) ರಿಟರ್ನಿಂಗ್ ಆಫೀಸರನು ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಅಂಟಿಸಿದ ಯಾವುದೇ ಪಟ್ಟಿಯನ್ನು, ನೋಟೀಸನ್ನು ಅಥವಾ ಇತರ ದಸ್ತಾವೇಜನ್ನು ಮೋಸದಿಂದ ವಿರೂಪಗೊಳಿಸಿದರೆ; ಅಥವಾ ನಾಶಪಡಿಸಿದರೆ ಅಥವಾ ತೆಗೆದುಹಾಕಿದರೆ; ಅಥವಾ

ಸಿ) ಯಾವುದೇ ಮತಪತ್ರವನ್ನು ಅಥವಾ ಯಾವುದೇ ಮಪತ್ರದ ಮೇಲಿನ ಅಧಿಕೃತ ಚಿಹ್ನೆಯನ್ನು ಮೋಸದಿಂದ ವಿರೂಪಗೊಳಿಸಿದರೆ ಅಥವಾ ಮೋಸದಿಂದ ನಾಶಪಡಿಸಿದರೆ; ಅಥವಾ

ಡಿ) ಕ್ರಮಬದ್ಧವಾದ ಅಧಿಕಾರವಿಲ್ಲದೆ ಯಾವುದೇ ಮತಪತ್ರವನ್ನು ಯಾವನೇ ವ್ಯಕ್ತಿಗೆ ಸರಬರಾಜು ಮಾಡಿದರೆ ಅಥವಾ ಯಾವನೇ ವ್ಯಕ್ತಿಯಿಂದ ಯಾವುದೇ ಮತಪತ್ರವನ್ನು ಸ್ವೀಕರಿಸಿದರೆ ಅಥವಾ ಯಾವುದೇ ಮತಪತ್ರದ ಸ್ವಾಧೀನವನ್ನು ಹೊಂದಿದ್ದರೆ; ಅಥವಾ

ಇ) ಕಾನೂನು ಮೂಲಕ ತಾನು ಹಾಕಲು ಅಧಿಕೃತನಾಗಿರುವ ಮತಪತ್ರದ ಹೊರತು ಬೇರೆ ಯಾವುದನ್ನಾದರೂ ಮತಪೆಟ್ಟಿಗೆಯೊಳಗೆ ಮೋಸದಿಂದ ಹಾಕಿದರೆ; ಅಥವಾ

ಎಫ್) ಕ್ರಮಬದ್ಧವಾದ ಅಧಿಕಾರವಿಲ್ಲದ ಚುನಾವಣೆ ಉದ್ದೇಶಗಳಿಗಾಗಿ ಆಗ ಉಪಯೋಗದಲ್ಲಿರುವ ಯಾವುದೇ ಮತಪೆಟ್ಟಿಗೆ ಅಥವಾ ಮತಪತ್ರಗಳನ್ನು ನಾಶಪಡಿಸಿದರೆ ತೆಗೆದುಕೊಂಡರೆ, ತೆರೆದರೆ ಅಥವಾ ಅನ್ಯಥಾ ಅವುಗಳಲ್ಲಿ ಹಸ್ತಕ್ಷೇಪ ಮಾಡಿದರೆ; ಅಥವಾ

ಜಿ) ಸಂದರ್ಭಾನುಸಾರ ಮೋಸದಿಂದ ಅಥವಾ ಕ್ರಮಬದ್ಧವಾದ ಅಧಿಕಾರವಿಲ್ಲದೆ ಹಿಂದೆ ಹೇಳಿದ ಯಾವುದೇ ಕಾರ್ಯವನ್ನು ಮಾಡಲು ಪ್ರಯತ್ನಿಸಿದರೆ ಅಥವಾ ಯಾವುದೇ ಅಂಥ

ಕಾರ್ಯಗಳನ್ನು ಮಾಡುವುದಕ್ಕೆ ಉದ್ದೇಶಪೂರ್ವಕವಾಗಿ ಸಹಾಯ ಮಾಡಿದರೆ ಅಥವಾ ದುಷ್ಪ್ರೇರಿಸಿದರೆ, ಅಪರಾಧದ ತಪ್ಪಿತಸ್ಥನಾಗತಕ್ಕದ್ದು.

(2) ಈ ಪ್ರಕರಣದ ಅಡಿಯಲ್ಲಿನ ಅಪರಾಧದ ತಪ್ಪಿತಸ್ಥನಾದ ಯಾವನೇ ವ್ಯಕ್ತಿಯು:–

ಎ) ಅವನು ಮತದಾನ ಕೇಂದ್ರದ ರಿಟರ್ನಿಂಗ್ ಆಫೀಸರ್ ಅಥವಾ ಪ್ರಿಸೈಡಿಂಗ್ ಆಫೀಸರ್ ಆಗಿದ್ದರೆ ಅಥವಾ ಚುನಾವಣೆಗೆ ಸಂಬಂಧಪಟ್ಟಂತೆ ಸರ್ಕಾರಿ ಕರ್ತವ್ಯದ ಮೇಲೆ ನಿಯೋಜನೆಗೊಂಡ ಇತರ ಯಾವನೇ ಅಧಿಕಾರಿಯಾಗಿದ್ದರೆ ಅಥವಾ ಗುಮಾಸ್ತನಾಗಿದ್ದರೆ ಅವನು ಅಪರಾಧ ನಿರ್ಣಯವಾದ ಮೇಲೆ ಎರಡು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

ಬಿ) ಅವನು ಇತರೆ ಯಾವನೇ ವ್ಯಕ್ತಿಯಾಗಿದ್ದರೆ ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಈ ಪ್ರಕರಣದಿಂದ ಉದ್ದೇಶಕ್ಕಾಗಿ, ವ್ಯಕ್ತಿಯನ್ನು ಚುನಾವಣೆಯನ್ನು ನಡೆಸುವುದರಲ್ಲಿ ಅಥವಾ ಮತಗಳ ಎಣಿಕೆಯು ಸೇರಿದಂತೆ ಚುನಾವಣೆಯ ಒಂದು ಭಾಗವನ್ನು ನಡೆಸುವುದರಲ್ಲಿ ಪಾಲ್ಗೊಳ್ಳುವುದು ಅಥವಾ ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಉಪಯೋಗಿಸಿದ ಮತಪತ್ರಗಳಿಗೆ ಅಥವಾ ಇತರ ದಸ್ತಾವೇಜುಗಳಿಗೆ ಚುನಾವಣೆ ನಡೆದ ತರುವಾಯ ಜವಾಬ್ದಾರನಾಗಿರುವುದು ಅವನ ಕರ್ತವ್ಯವಾಗಿದ್ದರೆ "ಸರ್ಕಾರಿ ಕರ್ತವ್ಯ"ದಲ್ಲಿ ನಿರತನಾಗಿರುವುದಾಗಿ ಭಾವಿಸತಕ್ಕದ್ದು. ಆದರೆ "ಸರ್ಕಾರಿ ಕರ್ತವ್ಯ" ಎಂಬ ಪದಾವಳಿಯು ಅಂಥ ಚುನಾವಣೆಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅಲ್ಲದೆ ಅನ್ಯಥಾ ವಿಧಿಸಿದ ಯಾವುದೇ ಕರ್ತವ್ಯವನ್ನು ಒಳಗೊಳ್ಳತಕ್ಕದ್ದಲ್ಲ.

(4) (2) ನೇ ಉಪ-ಪ್ರಕರಣದ (ಬಿ) ಖಂಡದ ಅಡಿಯಲ್ಲಿ ದಂಡನೀಯವಾದ ಅಪರಾಧವು ಸಂಜ್ಞೇಯವಾಗಿರತಕ್ಕದ್ದು.

**ಪ್ರಕರಣ 34. ಚುನಾವಣೆಯ ಸಂಬಂಧದಲ್ಲಿ ವರ್ಗಗಳ ನಡುವೆ ವೈರತ್ವವನ್ನು ಉತ್ತೇಜಿಸುವುದು –**

ಈ ಅಧಿನಿಯಮದ ಅಡಿಯಲ್ಲಿ ಚುನಾವಣೆಯ ಸಂಬಂಧದಲ್ಲಿ ಯಾವನೇ ವ್ಯಕ್ತಿಯು ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ಆಧಾರದ ಮೇಲೆ ಭಾರತದ ನಾಗರೀಕರ ವಿಭಿನ್ನ ವರ್ಗಗಳ ನಡುವೆ ವೈರತ್ವದ ಅಥವಾ ದ್ವೇಷದ ಭಾವನೆಗಳನ್ನು ಉತ್ತೇಜಿಸಿದರೆ ಅಥವಾ ಉತ್ತೇಜಿಸಲು ಪ್ರಯತ್ನಿಸಿದರೆ ಅಪರಾಧ ನಿರ್ಣಯವಾದ ಮೇಲೆ ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪ್ರಕರಣ 35. ಚುನಾವಣಾ ದಿವಸದ ಹಿಂದಿನ ದಿವಸದಂದು ಮತ್ತು ಚುನಾವಣಾ ದಿವಸದಂದು ಸಾರ್ವಜನಿಕ ಸಭೆಗಳ ನಿಷೇಧ –**

(1) ಯಾವನೇ ವ್ಯಕ್ತಿಯು ಮತದಾನವು ಪ್ರಾರಂಭವಾಗುವ ದಿನಾಂಕಕ್ಕೆ ಮುಂಚೆ ನಲವತ್ತೆಂಟು ಗಂಟೆಗಳೊಳಗೆ ಅಥವಾ ಆ ಮತದಾನ ಕ್ಷೇತ್ರದಲ್ಲಿ ಚುನಾವಣೆಗಾಗಿ ಮತದಾನ ನಡೆಯುವಂಥ

ದಿನಾಂಕದಂದು ಅಥವಾ ದಿನಾಂಕಗಳಂದು ಯಾವುದೇ ಸಾರ್ವಜನಿಕ ಸಭೆಯನ್ನು ಕರೆಯತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ ಅಥವಾ ಅದಕ್ಕೆ ಹಾಜರಾಗತಕ್ಕದ್ದಲ್ಲ.

(2) (1)ನೇ ಉಪ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವನೇ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಇನ್ನೂರೈವತ್ತು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ಪ್ರಕರಣ 36. ಚುನಾವಣೆಯ ದಿನದಂದು ಜಾತ್ರೆ ಇತ್ಯಾದಿಗಳನ್ನು ನಿಷೇಧಿಸಲು ಡೆಪ್ಯುಟಿ ಕಮೀಷನರ್ ಅವರಿಗಿರುವ ಅಧಿಕಾರ:–**

ಡೆಪ್ಯುಟಿ ಕಮಿಷನರ್ ಅವರು ಮುಕ್ತ ಮತ್ತು ನ್ಯಾಯೋಚಿತ ಚುನಾವಣೆಯನ್ನು ಖಚಿತಪಡಿಸುವುದಕ್ಕಾಗಿ ಪಂಚಾಯತಿ ಪ್ರದೇಶದಲ್ಲಿ ಯಾವುದೇ ಜಾತ್ರೆ (ದನಗಳ ಜಾತ್ರೆಯೂ ಸೇರಿದಂತೆ) ಅಥವಾ ಸಂತೆಯನ್ನು ಅಂಥ ಪ್ರದೇಶದ ಗ್ರಾಮ ಪಂಚಾಯತಿಗೆ ನಡೆಯುವ ಚುನಾವಣೆಯ ದಿನದಂದು ನಿಷೇಧಿಸಬಹುದು.

**ಪ್ರಕರಣ 37. ಚುನಾವಣಾ ಸಭೆಗಳಲ್ಲಿ ಗಲಭೆ:–**

(1) ಈ ಅಧಿನಿಯಮದ ಅಡಿಯಲ್ಲಿನ ಚುನಾವಣೆಯ ಸಂಬಂಧದಲ್ಲಿ ನಡೆಸಿದ ಸಾರ್ವಜನಿಕ ಸಭೆಯಲ್ಲಿ ಯಾವನೇ ವ್ಯಕ್ತಿಯು ಯಾವ ವ್ಯವಹಾರಕ್ಕಾಗಿ ಸಭೆಯನ್ನು ಕರೆಯಲಾಗಿದೆಯೋ ಆ ವ್ಯವಹಾರ ನಡೆಸುವುದನ್ನು ತಡೆಗಟ್ಟುವ ಉದ್ದೇಶದಿಂದ ಅನುಚಿತವಾಗಿ ನಡೆದುಕೊಂಡರೆ ಅಥವಾ ನಡೆದುಕೊಳ್ಳಲು ಇತರರನ್ನು ಪ್ರಚೋದಿಸಿದರೆ ಅವನು ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

(2) ಯಾವನೇ ಪೊಲೀಸ್ ಅಧಿಕಾರಿಯು ಯಾವನೇ ವ್ಯಕ್ತಿಯು (1)ನೇ ಉಪ ಪ್ರಕರಣದ ಅಡಿಯಲ್ಲಿನ ಯಾವುದೇ ಅಪರಾಧವನ್ನು ಮಾಡಿರುವನೆಂದು ಯುಕ್ತವಾಗಿ ಸಂಶಯಪಟ್ಟರೆ, ಸಭೆಯ ಅಧ್ಯಕ್ಷನು ಹಾಗೆ ಮಾಡಲು ಕೋರಿದರೆ ಅವನು ಆ ವ್ಯಕ್ತಿಯನ್ನು ಅವನ ಹೆಸರು ಮತ್ತು ವಿಳಾಸವನ್ನು ಕೂಡಲೇ ತಿಳಿಸಲು ಅಗತ್ಯಪಡಿಸಬಹುದು ಮತ್ತು ಆ ವ್ಯಕ್ತಿಯು ಅವನ ಹೆಸರು ಮತ್ತು ವಿಳಾಸವನ್ನು ಹಾಗೆ ತಿಳಿಸಲು ನಿರಾಕರಿಸಿದರೆ ಅಥವಾ ತಪ್ಪಿದರೆ ಅಥವಾ ಅವನು ಸುಳ್ಳು ಹೆಸರು ಮತ್ತು ವಿಳಾಸವನ್ನು ಕೊಟ್ಟಿರುವನೆಂದು ಪೊಲೀಸ್ ಅಧಿಕಾರಿಯು ಸಂಶಯಪಟ್ಟರೆ ಪೊಲೀಸು ಅಧಿಕಾರಿಯು ವಾರೆಂಟಿಲ್ಲದೆ ಅವನನ್ನು ದಸ್ತಗಿರಿ ಮಾಡಬಹುದು.

**ಪ್ರಕರಣ 38. ಕಿರು ಹೊತ್ತಿಗೆಗಳು, ಭಿತ್ತಿ ಪತ್ರಗಳು ಮುಂತಾದವುಗಳನ್ನು ಮುದ್ರಿಸುವುದರ ಬಗ್ಗೆ ನಿರ್ಬಂಧಗಳು:–**

(1) ಯಾವನೇ ವ್ಯಕ್ತಿಯು, ಮುದ್ರಕ ಮತ್ತು ಪ್ರಕಾಶಕನ ಹೆಸರುಗಳು ಮತ್ತು ವಿಳಾಸಗಳು ಇಲ್ಲದಿರುವಂಥ ಯಾವುದೇ ಚುನಾವಣಾ ಕಿರುಹೊತ್ತಿಗೆಗಳು ಅಥವಾ ಭಿತ್ತಿಪತ್ರವನ್ನು ಮುದ್ರಿಸತಕ್ಕದ್ದಲ್ಲ ಅಥವಾ ಪ್ರಕಟಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಅಥವಾ ಪ್ರಕಟಿಸುವಂತೆ ಮಾಡತಕ್ಕದ್ದಲ್ಲ.

(2) ಯಾವನೇ ವ್ಯಕ್ತಿಯು ಯಾವುದೇ ಚುನಾವಣಾ ಕಿರುಹೊತ್ತಿಗೆಯನ್ನು ಅಥವಾ ಭಿತ್ತಿಪತ್ರವನ್ನು:–

(ಎ) ಅದರ ಪ್ರಕಾಶಕನ ಗುರುತಿನ ಬಗ್ಗೆ ತಾನು ರುಜು ಮಾಡಿರುವ ಮತ್ತು ತನ್ನನ್ನು ವೈಯಕ್ತಿಕವಾಗಿ ಬಲ್ಲ ಇಬ್ಬರು ವ್ಯಕ್ತಿಗಳು ಅನುಪ್ರಮಾಣಿಸಿದ ಘೋಷಣೆಯನ್ನು ಮುದ್ರಕನಿಗೆ ದ್ವಿಪ್ರತಿಯಲ್ಲಿ ಕೊಟ್ಟ ಹೊರತು; ಮತ್ತು

(ಬಿ) ದಸ್ತಾವೇಜುಗಳನ್ನು ಮುದ್ರಿಸಿದ ತರುವಾಯ ಯುಕ್ತ ಕಾಲದೊಳಗೆ ಘೋಷಣೆಯ ಒಂದು ಪ್ರತಿಯನ್ನು ದಸ್ತಾವೇಜಿನ ಒಂದು ಪ್ರತಿಯೊಂದಿಗೆ ಮುದ್ರಕನು ಜಿಲ್ಲಾ ಮ್ಯಾಜಿಸ್ಟ್ರೇಟರನಿಗೆ ಕಳುಹಿಸಿದ ಹೊರತು,

ಮುದ್ರಿಸತಕ್ಕದ್ದಲ್ಲ ಅಥವಾ ಮುದ್ರಿಸುವಂತೆ ಮಾಡತಕ್ಕದ್ದಲ್ಲ.

(3) ಈ ಪ್ರಕರಣದ ಉದ್ದೇಶಗಳಿಗಾಗಿ:

(ಎ) ಕೈಯಿಂದ ಬರೆದು ಪ್ರತಿ ಮಾಡುವುದನ್ನು ಹೊರತುಪಡಿಸಿ ದಸ್ತಾವೇಜಿನ ಪ್ರತಿಗಳನ್ನು ಹೆಚ್ಚು ಮಾಡುವ ಯಾವುದೇ ಕಾರ್ಯವಿಧಾನವನ್ನು "ಮುದ್ರಣ"ವೆಂದು ಭಾವಿಸತಕ್ಕದ್ದು ಮತ್ತು "ಮುದ್ರಣಕಾರ" ಎಂಬ ಪದವನ್ನು ತದನುಸಾರವಾಗಿ ಅರ್ಥೈಸತಕ್ಕದ್ದು; ಮತ್ತು

(ಬಿ) ಚುನಾವಣಾ ಕಿರುಹೊತ್ತಿಗೆ ಅಥವಾ ಭಿತ್ತಿಪತ್ರ ಎಂದರೆ ಯಾವೊಬ್ಬ ಅಭ್ಯರ್ಥಿಯ ಅಥವಾ ಅಭ್ಯರ್ಥಿಗಳ ಒಂದು ಗುಂಪಿನ ಚುನಾವಣೆಗೆ ಉತ್ತೇಜನ ನೀಡುವ ಅಥವಾ ಪ್ರತಿಕೂಲ ಪ್ರಭಾವ ಉಂಟುಮಾಡುವ ಉದ್ದೇಶಕ್ಕಾಗಿ ಹಂಚಿರುವ ಯಾವುದೇ ಮುದ್ರಿತ ಕಿರುಪುಸ್ತಕ, ಕರಪತ್ರ ಅಥವಾ ಇತರ ದಸ್ತಾವೇಜು ಅಥವಾ ಚುನಾವಣೆಗೆ ಸಂಬಂಧಪಟ್ಟ ಯಾವುದೇ ಪ್ರಕಟಣಾ ಪತ್ರ ಅಥವಾ ಭಿತ್ತಿಪತ್ರ; ಆದರೆ, ಅದು ಚುನಾವಣಾ ಸಭೆಯ ದಿನಾಂಕ, ವೇಳೆ, ಸ್ಥಳ ಮತ್ತು ಇತರ ವಿವರಗಳನ್ನು ಅಥವಾ ಚುನಾವಣಾ ಏಜೆಂಟರಿಗಾಗಿ ಅಥವಾ ಕಾರ್ಯಕರ್ತರಿಗಾಗಿ ನಿಯಮ ಸೂಚನೆಗಳನ್ನು ಮಾತ್ರ ತಿಳಿಸುವ ಯಾವುದೇ ಕರಪತ್ರ, ಪ್ರಕಟಣಾ ಪತ್ರ ಅಥವಾ ಭಿತ್ತಿಪತ್ರವನ್ನು ಒಳಗೊಳ್ಳುವುದಿಲ್ಲ.

(4) (1)ನೇ ಉಪ ಪ್ರಕರಣದ ಅಥವಾ (2)ನೇ ಉಪಪ್ರಕರಣದ ಯಾವುದೇ ಉಪಬಂಧವನ್ನು ಉಲ್ಲಂಘಿಸುವ ಯಾವೊಬ್ಬ ವ್ಯಕ್ತಿಯು ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

**ಪ್ರಕರಣ 39. ಚುನಾವಣೆಯಲ್ಲಿ ಕಾನೂನು ವಿರುದ್ದವಾಗಿ ವಾಹನವನ್ನು ಬಾಡಿಗೆಗಾಗಿ ಪಡೆಯುವುದಕ್ಕೆ ಅಥವಾ ಒದಗಿಸುವುದಕ್ಕೆ ದಂಡನೆ:**

ಯಾವನೇ ವ್ಯಕ್ತಿಯು ಚುನಾವಣೆಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ 22ನೇ ಪ್ರಕರಣದ (VI)ನೇ ಖಂಡದಲ್ಲಿ ನಿರ್ದಿಷ್ಟಪಡಿಸಿರುವಂತಹ ಯಾವುದೇ ಭ್ರಷ್ಟಾಚಾರದ ತಪ್ಪಿತಸ್ಥನಾಗಿದ್ದರೆ ಅವನ ಅಪರಾಧ ನಿರ್ಣಯವಾದ ಮೇಲೆ ಐದುನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**ಪ್ರಕರಣ 40. ಕೆಲವು ಅಪರಾಧಗಳ ಸಂಬಂಧದಲ್ಲಿ ಪ್ರಾಸಿಕ್ಯೂಷನ್:–**

ಡೆಪ್ಯುಟಿ ಕಮೀಷನರ್ ಅವರ ಆದೇಶದ ಮೂಲಕ ಅಥವಾ ಅವರ ಅಧಿಕಾರದ ಮೇರೆಗೆ ಮಾಡಿದ ದೂರು ಇದ್ದ ಹೊರತು ಯಾವ ನ್ಯಾಯಾಲಯವೂ 33ನೇ ಪ್ರಕರಣದ (2)ನೇ ಉಪ

ಪ್ರಕರಣದ(ಎ) ಖಂಡದ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಸಂಜ್ಞೇಯಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**ಪ್ರಕರಣ 308–ಎಸಿ. ಚುನಾವಣೆ ಕಾಲದಲ್ಲಿ ಭ್ರಷ್ಟಾಚಾರಗಳನ್ನು ತಡೆಗಟ್ಟುವುದು:–**

1) ಚುನಾವಣಾ ಕಾಲದಲ್ಲಿ ಲಂಚಗುಳಿತನ ಮತ್ತು ಅನಗತ್ಯ ಪ್ರಭಾವ ಬೀರುವಂತಹ ಭ್ರಷ್ಟಾಚಾರಗಳನ್ನು ತಡೆಯುವ ದೃಷ್ಟಿಯಿಂದ, ರಾಜ್ಯ ಚುನಾವಣಾ ಆಯೋಗವು ಈ ಮುಂದಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು, ಎಂದರೆ:–

a) ನೀತಿ ಸಂಹಿತೆಯನ್ನು ಚುನಾವಣಾ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಫಲಿತಾಂಶಗಳನ್ನು ಘೋಷಿಸುವ ದಿನಾಂಕದವರೆಗೆ ಜಾರಿಗೆ ತರತಕ್ಕದ್ದು;

b) ರಿಟರ್ನಿಂಗ್ ಆಫೀಸರ್‌ಗಳು ಪ್ರತಿಯೊಂದು ಮತಗಟ್ಟೆಯಲ್ಲಿ ಚುನಾವಣಾ ಪ್ರಕ್ರಿಯೆಗಳ ವೀಡಿಯೋ–ಗ್ರಾಫಿಕ್ ಚಿತ್ರೀಕರಣ ಮಾಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು;

c) ಯಾವ ಪಂಚಾಯತ್ ಪ್ರದೇಶದಲ್ಲಿ ನೀತಿ ಸಂಹಿತೆಯು ಜಾರಿಯಲ್ಲಿರುತ್ತದೋ, ಆ ಪಂಚಾಯತ್ ಪ್ರದೇಶದ ಒಳಗೆ ನೀತಿ ಸಂಹಿತೆಯು ಜಾರಿಯಲ್ಲಿರುವ ಇಡೀ ಅವಧಿವರೆಗೆ ಎಲ್ಲಾ ಮದ್ಯದ ಅಂಗಡಿಗಳನ್ನು ಹಾಗೂ ಮದ್ಯ ತಯಾರಿಕಾ ಘಟಕಗಳನ್ನು ಮುಚ್ಚತಕ್ಕದ್ದು. ಮಧ್ಯದ ಅಂಗಡಿಗಳ ಮತ್ತು ಮದ್ಯ ತಯಾರಿಕಾ ಘಟಕಗಳ ಮಾಲೀಕರು, ಅಧಿಭೋಗದಾರರು ಮತ್ತು ಸಂದರ್ಭಾನುಸಾರವಾಗಿ ವ್ಯವಸ್ಥಾಪಕರು ಚುನಾವಣಾ ನೀತಿ ಸಂಹಿತೆಯು ಜಾರಿಯಲ್ಲಿರುವ ಅವಧಿಯಲ್ಲಿ ತಮ್ಮ ಘಟಕಗಳನ್ನು ಮುಚ್ಚತಕ್ಕದ್ದು ಮತ್ತು ಮೊಹರು ಮಾಡಿ ಕೀಯನ್ನು ಜಿಲ್ಲಾಧಿಕಾರಿಗಳಿಗೆ ಅಥವಾ ಅಧಿಕಾರ ವ್ಯಾಪ್ತಿಯುಳ್ಳ ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರವರಿಗೆ ಒಪ್ಪಿಸತಕ್ಕದ್ದು. ಆ ಕಾಲದಲ್ಲಿ ಯಾರಾದರೂ ಮದ್ಯವನ್ನು ಸ್ವಾಧೀನದಲ್ಲಿಟ್ಟುಕೊಂಡಿರುವುದು ಅಥವಾ ಮದ್ಯವನ್ನು ಸೇವಿಸಿದ ತರುವಾಯ ಸಾರ್ವಜನಿಕ ಉಪದ್ರವ, ಬೀದಿ ರಂಪಾಟ ಮಾಡುತ್ತಿರುವುದು ಕಂಡು ಬಂದರೆ ಮುನ್ನೆಚ್ಚರಿಕೆ ಕ್ರಮವಾಗಿ ಚುನಾವಣೆ ಮುಕ್ತಾಯವಾಗುವವರೆಗೆ ಅವರನ್ನು ಕಸ್ಟಡಿಯಲ್ಲಿ ಇಡತಕ್ಕದ್ದು. ನೀತಿ ಸಂಹಿತೆ ಜಾರಿಯಲ್ಲಿರುವ ಅವಧಿಯಲ್ಲಿ ಮಾಡುವ ಯಾವುದೇ ಉಲ್ಲಂಘನೆಗಳು ಸಂಜ್ಞೇಯ ಮತ್ತು ಜಾಮೀನುರಹಿತ ಅಪರಾಧಗಳಾಗತಕ್ಕದ್ದು ಮತ್ತು ತತ್ಕಾಲದಲ್ಲಿ ಜಾರಿಯಲ್ಲಿರುವ ಸುಸಂಗತ ಕಾನೂನಿನ ಮೇರೆಗೆ ಜುಲ್ಮಾನೆಯ ಮತ್ತು ಕಾರಾವಾಸ ಶಿಕ್ಷೆಯ ದಂಡನೆಗೆ ಒಳಪಡತಕ್ಕದ್ದು.